# ವಚನ ರಸಪ್ರಶ್ನೆ (ಕ್ವಿಜ್)

'ವಚನ ರಸಪ್ರಶ್ನೆ' ಕ್ವಿಜ್ ಸ್ವರೂಪದ ಒಂದು ಹೊಸ ವಿಶಿಷ್ಟ ಸ್ಪರ್ಧಾವಳಿ. ಬಹುಶಃ ಇದೀಗ ಹಲವೆಡೆ ಈ ರೂಪದ ಕಾರ್ಯಕ್ರಮಗಳು ನಡೆಯುತ್ತಿವೆ. ಆದರೆ ಇಪ್ಪತ್ತು ವರ್ಷಗಳ ಹಿಂದೆ ವಚನಜ್ಯೋತಿ ಬಳಗ 'ವಚನಾಮೃತವರ್ಷಿಣಿ ಮಹೋತ್ಸವ'ದಲ್ಲಿ ಈ ವಚನ ರಸಪ್ರಶ್ನೆಯನ್ನು ಆರಂಭ ಮಾಡಿದಾಗ ವಚನ ಚಳವಳಿಗೆ ಸಂಪೂರ್ಣವಾಗಿ ಮೀಸಲಾದ ಈ ಕ್ವಿಜ್ ಕಾರ್ಯಕ್ರಮವನ್ನು ಕಂಡು ಬಹಳಷ್ಟು ಮಂದಿ ಅಚ್ಚರಿಪಟ್ಟರು. ಶಾಲೆಗಳಿಗೆ ಮುಂಚಿತವಾಗಿ ಈ ಕ್ವಿಜ್‌ನ್ನು ನೀಡಿ ವಿದ್ಯಾರ್ಥಿಗಳು ಇದನ್ನು ಓದಿ ಅರ್ಥಮಾಡಿಕೊಳ್ಳಲು ಇದರಲ್ಲಿ ಅವಕಾಶ ನೀಡಲಾಗುವುದು. ಕಳೆದ ವರ್ಷದ ವಚನಾಮೃತವರ್ಷಿಣಿ ಮಹೋತ್ಸವಗಳಲ್ಲಿ ವಿದ್ಯಾರ್ಥಿಗಳು ಅತ್ಯಂತ ಆಸಕ್ತಿಯಿಂದ ಇದರಲ್ಲಿ ಭಾಗವಹಿಸುತ್ತಿದ್ದಾರೆ. ಇಲ್ಲಿಯ ಪ್ರಶ್ನೆಗಳಿಗೆ ಚಕಚಕನೆ ಉತ್ತರಿಸುತ್ತಾರೆ. ಬೆಂಗಳೂರು ಮಹಾನಗರದ ಮಹಿಳೆಯರೂ ಸಹ ಇದರಲ್ಲಿ ಆಸಕ್ತಿ ವಹಿಸಿರುವುದು ಸಂತೋಷದ ವಿಚಾರವಾಗಿದೆ. ಇದು ತಂಡ ಸ್ಪರ್ಧೆ. ವಚನ ರಸಪ್ರಶ್ನೆಯನ್ನು ಪರಿಷ್ಕರಿಸಲಾಗಿದ್ದು ಮತ್ತಷ್ಟು ಆಸಕ್ತಿದಾಯಕ ವಿಷಯಗಳು ಇದರಲ್ಲಿ ಅಡಕವಾಗಿವೆ. ಇಲ್ಲಿ ಇರುವ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡುವುದು ಕಷ್ಟದಾಯಕವಾದರೂ ಸುಖದಾಯಕ. ಏಕೆಂದರೆ ವಚನ ರಸಪ್ರಶ್ನೆಯನ್ನು ಓದುವುದೇ ಒಂದು ಭಾಗ್ಯ. ವಚನ ಚಳವಳಿಯ ಸಂಕ್ಷಿಪ್ತ ಪರಿಚಯ ಈ ವಚನ ರಸಪ್ರಶ್ನೆಯಿಂದಾಗುತ್ತದೆ ಎಂಬ ಆಶಯ ನಮ್ಮದಾಗಿದೆ. ವಚನ ರಸಪ್ರಶ್ನೆಯನ್ನು ಓದೋಣ. ಭಾಗವಹಿಸೋಣ. ಅದರಂತೆ ನಡೆಯೋಣ.

## ೧. ವಚನಕಾರರು ಮತ್ತು ಅವರ ಅಂಕಿತಗಳು

| | | |
|---|---|---|
| ೧. | ಬಸವಣ್ಣ | – ಕೂಡಲ ಸಂಗಮದೇವ |
| ೨. | ಅಲ್ಲಮಪ್ರಭು | – ಗುಹೇಶ್ವರ |
| ೩. | ಚನ್ನಬಸವಣ್ಣ | – ಚನ್ನಕೂಡಲಸಂಗಮದೇವ |
| ೪. | ಸಿದ್ಧರಾಮ | – ಕಪಿಲಸಿದ್ಧಮಲ್ಲಿಕಾರ್ಜುನ |
| ೫. | ಅಜಗಣ್ಣ | – ಮಹಾಘನ ಸೋಮೇಶ್ವರ |
| ೬.. | ಅಂಬಿಗರ ಚೌಡಯ್ಯ | – ಅಂಬಿಗರ ಚೌಡಯ್ಯ |
| ೭.. | ಅಮುಗಿದೇವಯ್ಯ | – ಸಿದ್ಧಸೋಮನಾಥ |
| ೮. | ಆದಯ್ಯ | – ಸೌರಾಷ್ಟ್ರ ಸೋಮೇಶ್ವರ |
| ೯. | ಅರಿವಿನ ಮಾರಿತಂದೆ | – ಸದಾಶಿವಮೂರ್ತಿ |
| ೧೦. | ಅಂಗಸೋಂಕಿನ ಲಿಂಗತಂದೆ | – ಭೋಗಭಂಕೇಶ್ವರ ಲಿಂಗ |
| ೧೧. | ಅಘ್ಘವಣಿ ಹಂಪಯ್ಯ | – ಹಂಪೆಯ ವಿರುಪ |
| ೧೨. | ಅಘ್ಘವಣಿ ಹೊನ್ನಯ್ಯ | – ಹುಲಿಗೆರೆಯ ವರದ ಸೋಮನಾಥ |
| ೧೩. | ಅನಾಮಿಕ ನಾಚಯ್ಯ | – ನಾಚಯ್ಯಪ್ರಿಯ ಚನ್ನರಾಮೇಶ್ವರ |
| ೧೪. | ಅಪ್ಪಿದೇವಯ್ಯ | – ವರದ ಮಹಾಲಿಂಗ |
| ೧೫. | ಅಮರಗುಂಡದ ಮಲ್ಲಿಕಾರ್ಜುನ | – ಮಾಗುಡದ ಮಲ್ಲಿಕಾರ್ಜುನ |
| ೧೬. | ಅವಸರದ ರೇಕಣ್ಣ | – ಸದ್ಯೋಜಾತ ಲಿಂಗ |
| ೧೭. | ಆನಂದಯ್ಯ | – ಆನಂದಸಿಂಧು ರಾಮೇಶ್ವರ |
| ೧೮. | ಆಯ್ದಕ್ಕಿ ಮಾರಯ್ಯ | – ಅಮರೇಶ್ವರಲಿಂಗ |

| | | | |
|---|---|---|---|
| ೧೯. | **ಉರಿಲಿಂಗದೇವ** | – | ಉರಿಲಿಂಗದೇವ |
| ೨೦. | **ಉರಿಲಿಂಗಪೆದ್ದಿ** | – | ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರ |
| ೨೧. | **ಉಗ್ಘಡಿಸುವ ಗಟ್ಟಿದೇವಯ್ಯ** | – | ಕೂಡಲಸಂಗಮದೇವರಲ್ಲಿ ಬಸವಣ್ಣ |
| ೨೨. | **ಉಪ್ಪರಗುಡಿಯ ಸೋಮಿದೇವಯ್ಯ** | – | ಗಾರುಡೇಶ್ವರ ಲಿಂಗ |
| ೨೩. | **ಉಳಿಮೇಶ್ವರ ಚಿಕ್ಕಯ್ಯ** | – | ಉಳಿಯುಮೇಶ್ವರ |
| ೨೪. | **ಎಚ್ಚರಿಕೆ ಕಾಯಕದ ಮುತ್ತನಾಥಯ್ಯ** | – | ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರುಂಗೇಶ್ವರಲಿಂಗ |
| ೨೫. | **ಎಲೆಗಾರ ಕಾಮಣ್ಣ** | – | ಅತುರೇಶ್ವರಲಿಂಗ |
| ೨೫ಅ. | **ಏಲೇಶ್ವರದ ಕೇತಯ್ಯ** | – | ಏಲೇಶ್ವರಲಿಂಗ |
| ೨೬. | **ಏಕಾಂತದ ರಾಮಯ್ಯ** | – | ಚೆನ್ನರಾಮೇಶ್ವರ |
| ೨೭. | **ಒಕ್ಕಲಿಗ ಮುದ್ದಣ್ಣ** | – | ಕಾಮಭೀಮ ಜೀವಧನದೊಡಯ್ಯ |
| ೨೮. | **ಕಂಬದ ಮಾರಯ್ಯ** | – | ಕದಂಬಲಿಂಗ |
| ೨೯. | **ಕನ್ನಡಿ ಕಾಯಕದ ಅಮ್ಮಿದೇವಯ್ಯ** | – | ಚನ್ನಬಸವಣ್ಣಪ್ರಿಯ ಕಮಳೇಶ್ವರಲಿಂಗ |
| ೩೦. | **ಕನ್ನದ ಮಾರಿತಂದೆ** | – | ಮಾರನವೈರಿ ಮಾರೇಶ್ವರ |
| ೩೧. | **ಕರುಳಕೇತಯ್ಯ** | – | ಮನಕ್ಕೆ ಮಹೋಹರ ಶಂಕೇಶ್ವರಲಿಂಗ |
| ೩೨. | **ಕಲಕೇತಯ್ಯ** | – | ಮೇಖಲೇಶ್ವರಲಿಂಗ |
| ೩೩. | **ಕಾಮಾಟದ ಭೀಮಣ್ಣ** | – | ಧಾರೇಶ್ವರಲಿಂಗ |
| ೩೪. | **ಕಿನ್ನರಿ ಬ್ರಹ್ಮಯ್ಯ** | – | ತ್ರಿಪುರಾಂತಕ ಲಿಂಗ |
| ೩೫. | **ಕೀಲಾರದ ಭೀಮಣ್ಣ** | – | ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗ |
| ೩೬. | **ಕೂಗಿನ ಮಾರಯ್ಯ** | – | ಮಹಾಮಹಿಮ ಮಾರೇಶ್ವರ |
| ೩೭. | **ಕೋಟಾರದ ಸೋಮಣ್ಣ** | – | ಬಸವಣ್ಣಪ್ರಿಯ ನಿಃಕಳಂಕ ಸೋಮೇಶ್ವರ |
| ೩೮. | **ಕೋಲಶಾಂತಯ್ಯ** | – | ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ |
| ೩೯. | **ಗಜೇಶ ಮಸಣಯ್ಯ** | – | ಗಜೇಶ್ವರದೇವ |
| ೪೦. | **ಗಾಣದ ಕನ್ನಪ್ಪ** | – | ಗುಹೇಶ್ವರನ ಶರಣ ಅಲ್ಲಮ |
| ೪೧. | **ಗಾವುದಿ ಮಾಚಯ್ಯ** | – | ಕಲ್ಯಾಣ ತ್ರಿಪುರಾಂತಕಲಿಂಗದಲ್ಲಿ ಗಾವುದಿ ಮಾಚಯ್ಯ |
| ೪೨. | **ಗುಪ್ತ ಮಂಚಣ್ಣ** | – | ನಾರಾಯಣಪ್ರಿಯ ರಾಮನಾಥ |
| ೪೩. | **ಗುರುಪುರದ ಮಲ್ಲಯ್ಯ** | – | ಪುರದ ಮಲ್ಲಯ್ಯ |
| ೪೪. | **ಗೋರಕ್ಷ** | – | ಸಿದ್ಧಸೋಮನಾಥಲಿಂಗ |
| ೪೫. | **ಗುರುಬಸವೇಶ್ವರ** | – | ಗುರುಬಸವ |
| ೪೬. | **ಗುರುಭಕ್ತಯ್ಯ** | – | ಘಂಟೇಶ್ವರಲಿಂಗ |
| ೪೭. | **ಘಟ್ಟಿವಾಳಯ್ಯ** | – | ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ |
| ೪೮. | **ಚಂದಿಮರಸ** | – | ಸಿಮ್ಮಲಿಗೆಯ ಚೆನ್ನರಾಮ |
| ೪೯. | **ಜಗಳಗಂಟ ಕಾಮಣ್ಣ** | – | ಕಾಮೇಶ್ವರ |
| ೫೦. | **ಜೇಡರ ದಾಸಿಮಯ್ಯ** | – | ರಾಮನಾಥ |

| | | | |
|---|---|---|---|
| ೫೧. | **ಜೇಡರ ಮಾಯಣ್ಣ** | – | ಶಂಭು ಸೋಮನಾಥಲಿಂಗ |
| ೫೨. | **ಡಕ್ಕೆಯ ಬೊಮ್ಮಣ್ಣ** | – | ಕಾಲಾಂತಕ ಭೀಮೇಶ್ವರಲಿಂಗ |
| ೫೩. | **ಡೋಹರ ಕಕ್ಕಯ್ಯ** | – | ಅಭಿನವ ಮಲ್ಲಿಕಾರ್ಜುನ |
| ೫೪. | **ತುರುಗಾಹಿ ರಾಮಣ್ಣ** | – | ಗೋಪಿನಾಥ ವಿಶ್ವೇಶ್ವರಲಿಂಗ |
| ೫೫. | **ತಳವಾರ ಕಾಮಿದೇವಯ್ಯ** | – | ಕಾಮಹರಪ್ರಿಯ ರಾಮನಾಥ |
| ೫೬. | **ತೆಲುಗರ ಮಸಣಯ್ಯ** | – | ತೆಲುಗೇಶ್ವರ |
| ೫೭. | **ದಶಗಣ ಸಿಂಗಿದೇವಯ್ಯ** | – | ನಾಚಯ್ಯಪ್ರಿಯ ಮಲ್ಲಿನಾಥ |
| ೫೮. | **ದಸರಯ್ಯ** | – | ದಸರೇಶ್ವರಲಿಂಗ |
| ೫೯. | **ದಾಸೋಹದ ಸಂಗಣ್ಣ** | – | ಮಾತುಳಂಗ ಮಧುಕೇಶ್ವರ |
| ೬೦. | **ನಗೆಯ ಮಾರಿತಂದೆ** | – | ಆತುರವೈರಿ ಮಾರೇಶ್ವರ |
| ೬೧. | **ನುಲಿಯ ಚಂದಯ್ಯ** | – | ಚಂದೇಶ್ವರಲಿಂಗ |
| ೬೨. | **ನಿಜಗುಣ ಯೋಗಿ** | – | ನಿಜಗುಣ |
| ೬೩. | **ನಿವೃತ್ತಿ ಸಂಗಯ್ಯ** | – | ನಿವೃತ್ತಿ ಸಂಗಯ್ಯ |
| ೬೪. | **ಪಂಡಿತಾರಾಧ್ಯ** | – | ಗುರುಸಿದ್ದಮಲ್ಲ |
| ೬೫. | **ಪುರದ ನಾಗಣ್ಣ** | – | ಅಮರಗುಂಡದ ಮಲ್ಲಿಕಾರ್ಜುನ |
| ೬೬. | **ಪ್ರಸಾದಿ ಭೋಗಣ್ಣ** | – | ಚನ್ನಬಸವಣ್ಣಪ್ರಿಯ ಭೋಗ ಮಲ್ಲಿಕಾರ್ಜುನ ಲಿಂಗ |
| ೬೭. | **ಪ್ರಸಾದಿ ಲೆಂಕಬಂಕಣ್ಣ** | – | ದಹನ ಚಂಡಿಕೇಶ್ವರಲಿಂಗ |
| ೬೮. | **ಬಹುರೂಪಿ ಚೌಡಯ್ಯ** | – | ರೇಕಣ್ಣಪ್ರಿಯ ನಾಗಿನಾಥ |
| ೬೯. | **ಬಳ್ಳೇಶ ಮಲ್ಲಯ್ಯ** | – | ಬಳ್ಳೇಶ್ವರ |
| ೭೦. | **ಬಾಚಿಕಾಯಕದ ಬಸವಣ್ಣ** | – | ಬಸವಣ್ಣಪ್ರಿಯ ವಿಶ್ವಕರ್ಮತಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗ |
| ೭೧. | **ಬಾಲ ಬೊಮ್ಮಣ್ಣ** | – | ವೀರ ಶೂರ ರಾಮೇಶ್ವರಲಿಂಗ |
| ೭೨. | **ಬಾಲಸಂಗಣ್ಣ** | – | ಕಮಟೇಶ್ವರಲಿಂಗ |
| ೭೩. | **ಬಾಹೂರ ಬೊಮ್ಮಣ್ಣ** | – | ಬ್ರಹ್ಮೇಶ್ವರಲಿಂಗ |
| ೭೪. | **ಬಿಬ್ಬಿ ಬಾಚಯ್ಯ** | – | ಏಣಾಂಕಧರ ಸೋಮೇಶ್ವರ |
| ೭೫. | **ಬೊಕ್ಕಸದ ಚಿಕ್ಕಣ್ಣ** | – | ಬಸವಣ್ಣಪ್ರಿಯ ನಾಗರೇಶ್ವರಲಿಂಗ |
| ೭೬. | **ಬರಿತಾರ್ಪಣದ ಚೆನ್ನಬಸವಣ್ಣ** | – | ಚೆನ್ನಕೂಡಲರಾಮೇಶ್ವರ ಲಿಂಗ |
| ೭೭. | **ಭಿಕಾರಿ ಭೀಮಯ್ಯ** | – | ಭಿಕಾರಿ ಭೀಮೇಶ್ವರ |
| ೭೮. | **ಭೋಗಣ್ಣ** | – | ನಿಜಗುರು ಭೋಗೇಶ್ವರ |
| ೭೯. | **ಮಡಿವಾಳ ಮಾಚಿದೇವ** | – | ಕಲಿದೇವರದೇವ |
| ೮೦. | **ಮಡಿವಾಳ ಮಾಚಿದೇವರ ಸಮಯಾಚಾರದ ಮಲ್ಲಿಕಾರ್ಜುನ** | – | ಪರಮ ಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನ |
| ೮೧. | **ಮಧುವರಸ** | – | ಅರ್ಕೇಶ್ವರಲಿಂಗ |
| ೮೨. | **ಮನಸಂದ ಮಾರಿತಂದೆ** | – | ಮನಸಂದಿತ್ತಾ ಮಾರೇಶ್ವರ |

| | | | |
|---|---|---|---|
| ೮೩. | **ಮನುಮುನಿ ಗುಮ್ಮಟದೇವ** | – | ಅಗಮ್ಯೇಶ್ವರಲಿಂಗ |
| ೮೪. | **ಮರುಳಶಂಕರದೇವ** | – | ಶುದ್ಧ ಸಿದ್ಧ ಪ್ರಸಿದ್ಧ ಶಾಂತ ಚೆನ್ನಮಲ್ಲಿಕಾರ್ಜುನ |
| ೮೫. | **ಮರುಳಸಿದ್ಧೇಶ್ವರ** | – | ರೇವಣ್ಣ ಪ್ರಭುವೇ |
| ೮೬. | **ಮಲಹರ ಕಾಯಕದ ಚಿಕ್ಕದೇವಯ್ಯ** | – | ಊರ್ಧ್ವರೇತೋಮೂರ್ತಿ ಶ್ವೇತಸ್ವಯಂಭು ಕಪಿಲೇಶ್ವರಲಿಂಗ |
| ೮೭. | **ಮಲ್ಲಿಕಾರ್ಜುನ ಪಂಡಿತಾರಾಧ್ಯ** | – | ಶ್ರೀ ಮಲ್ಲಿಕಾರ್ಜುನ |
| ೮೮. | **ಮುಳುಬಾವಿಯ ಸೋಮಣ್ಣ** | – | ಮುಳುಬಾವಿಯ ಸೋಮ |
| ೮೯. | **ಮಾದಾರ ಚೆನ್ನಯ್ಯ** | – | ಅರಿನಿಜಾತ್ಮ ರಾಮರಾಯ |
| ೯೦. | **ಮಾದಾರ ಧೂಳಯ್ಯ** | – | ಕಾಮಧೂಮ ಧೂಳೇಶ್ವರ |
| ೯೧. | **ಮಾರುಡಿಗೆಯ ನಾಚಯ್ಯ** | – | ಮಾರುಡಿಗೆಯ ನಾಚೇಶ್ವರಲಿಂಗ |
| ೯೨. | **ಮಾರೇಶ್ವರ ಒಡೆಯ** | – | ಮಾರೇಶ್ವರ |
| ೯೩. | **ಮಿರೆಮಿಂಡಯ್ಯ** | – | ಐಘಟದೂರ ರಾಮೇಶ್ವರಲಿಂಗ |
| ೯೪. | **ಮೇದರ ಕೇತಯ್ಯ** | – | ಗವರೇಶ್ವರ |
| ೯೫. | **ಮೋಳಿಗೆ ಮಾರಯ್ಯ** | – | ನಿಕಳಂಕ ಮಲ್ಲಿಕಾರ್ಜುನ |
| ೯೬. | **ಮೈದುನ ರಾಮಯ್ಯ** | – | ಮಹಾಲಿಂಗ ಚೆನ್ನರಾಮೇಶ್ವರ |
| ೯೭. | **ರಕ್ಕಸ ಬೊಮ್ಮಿತಂದೆ** | – | ರಕ್ಕಸನೊಡೆಯ ಕೊಟ್ಟೂರ ಬೇಡ |
| ೯೮. | **ರಾಯಸದ ಮಂಚಣ್ಣ** | – | ಜಾಂಬೇಶ್ವರ |
| ೯೯. | **ರೇಚದ ಬೊಂತಣ್ಣ** | – | ಬಸವಪ್ರಿಯ ಮಹಾಪ್ರಭು |
| ೧೦೦. | **ಲದ್ದೆಯ ಸೋಮಣ್ಣ** | – | ಬಾಪುಲದ್ದೆಯ ಸೋಮ |
| ೧೦೧. | **ವಚನ ಭಂಡಾರಿ ಶಾಂತರಸ** | – | ಅಲೇಖನಾಥ ಶೂನ್ಯ |
| ೧೦೨. | **ವರದ ಸಂಗಣ್ಣ** | – | ವರದ ಶಂಕೇಶ್ವರ |
| ೧೦೩. | **ವೀರಗೊಲ್ಲಾಳ** | – | ವೀರಬೀರೇಶ್ವರ |
| ೧೦೪. | **ವೀರಶಂಕರದಾಸಯ್ಯ** | – | ಘನಗುರು ಶಿವಲಿಂಗ ರಾಮನಾಥ |
| ೧೦೫. | **ವೇದಮೂರ್ತಿ ಸಂಗಣ್ಣ** | – | ಲಾಲಾಮಭೀರು ಸಂಗಮೇಶ್ವರಲಿಂಗ |
| ೧೦೬. | **ವೈದ್ಯ ಸಂಗಣ್ಣ** | – | ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ |
| ೧೦೭. | **ಶಂಕರದಾಸಿಮಯ್ಯ** | – | ನಿಜಗುರು ಶಂಕರದೇವ |
| ೧೦೮. | **ಶಿವನಾಗಮಯ್ಯ** | – | ನಾಗಪ್ರಿಯ ಚನ್ನರಾಮೇಶ್ವರ |
| ೧೦೯. | **ಶಿವಲೆಂಕ ಮಂಚಣ್ಣ** | – | ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ |
| ೧೧೦. | **ಸಂಗಮೇಶ್ವರ ಅಪ್ಪಣ್ಣ** | – | ಬಸವಪ್ರಿಯ ಕೂಡಲಚೆನ್ನಸಂಗಮದೇವ |
| ೧೧೧. | **ಸಕಲೇಶ ಮಾದರಸ** | – | ಸಕಳೇಶ್ವರದೇವ |
| ೧೧೨. | **ಸಗರದ ಬೊಮ್ಮಣ್ಣ** | – | ತನುಮನ ಸಂಗಮೇಶ್ವರಲಿಂಗ |
| ೧೧೩. | **ಸತ್ತಿಗೆ ಕಾಯಕದ ಮಾರಯ್ಯ** | – | ಐಘಂಟೇಶ್ವರ ಲಿಂಗ |
| ೧೧೪. | ಸಿದ್ಧಾಂತಿ ವೀರಸಂಗಯ್ಯ | – | ಗೋಳಾಕಾರದ ವಿಶ್ವವಿರಹಿತ ಲಿಂಗ |
| ೧೧೫. | **ಸುಂಕದ ಬಂಕಣ್ಣ** | – | ಸುಂಕದೂಡು ಬಂಕೇಶ್ವರಲಿಂಗ |

೧೧೬. **ಸೂಜಿಕಾಯಕದ ರಾಮಿತಂದೆ** – ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನ
೧೧೭. **ಸೊಡ್ಡಳ ಬಾಚೇಶ್ವರ** – ಸೊಡ್ಡಳ
೧೧೮. **ಹಡಪದ ಅಪ್ಪಣ್ಣ** – ಬಸವಪ್ರಿಯ ಕೂಡಲಚೆನ್ನಬಸವಣ್ಣ
೧೧೯. **ಹಾವಿನಹಾಳ ಕಲ್ಲಯ್ಯ** – ಮಹಾಲಿಂಗ ಕಲ್ಲೇಶ್ವರ
೧೨೦. **ಹುಂಜದ ಕಾಳಗದ ದಾಸಯ್ಯ** – ಚಂದ್ರಚೂಡೇಶ್ವರ ಲಿಂಗ
೧೨೧. **ಹೆಂಡದ ಮಾರಯ್ಯ** – ಧರ್ಮೇಶ್ವರ ಲಿಂಗ
೧೨೨. **ಹೊಡೆಹುಲ್ಲ ಬಂಕಣ್ಣ** – ಕುಂಭೇಶ್ವರಲಿಂಗ
೧೨೪. **ಅಕ್ಕನಾಗಮ್ಮ** – ಬಸವಣ್ಣಪ್ರಿಯ ಚೆನ್ನಸಂಗಯ್ಯ
೧೨೫. **ಅಕ್ಕಮಹಾದೇವಿ** – ಚನ್ನಮಲ್ಲಿಕಾರ್ಜುನ
೧೨೬. **ಅಕ್ಕಮ್ಮ** – ರಾಮೇಶ್ವರಲಿಂಗ
೧೨೭. **ಆಯ್ದಕ್ಕಿ ಲಕ್ಕಮ್ಮ** – ಮಾರಯ್ಯಪ್ರಿಯ ಅಮರೇಶ್ವರಲಿಂಗ
೧೨೮. **ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ** – ಉರಿಲಿಂಗಪದ್ದಿಗಳರಸ
೧೨೯. **ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ** – ನಿಜಗುಣೇಶ್ವರಲಿಂಗ
೧೩೦. **ಕದಿರೆ ಕಾಯಕದ ಕಾಳವ್ವೆ** – ಗುಮ್ಮೇಶ್ವರ
೧೩೧. **ಕದಿರ ರೆಮ್ಮವ್ವೆ** – ಕದಿರರೆಮ್ಮಿಯೊಡೆಯ ಗುಮ್ಮೇಶ್ವರ
೧೩೨. **ಕನ್ನಡಿ ಕಾಯಕದ ರೇಮಮ್ಮ** – ಸದ್ಗುರುಸಂಗ ನಿರಂಗಲಿಂಗ
೧೩೩. **ಕಾಲಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ** – ನಿಜಶಾಂತೇಶ್ವರ
೧೩೪. **ಕಾಲಕಣ್ಣಿಯ ಕಾಮಮ್ಮ** – ನಿರ್ಭೀತ ನಿಜಲಿಂಗ
೧೩೫. **ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ** – ಅಜಗಜೇಶ್ವರ ಲಿಂಗ
೧೩೬. **ಕೊಟ್ಟಣದ ಸೊಮಮ್ಮ** – ನಿರ್ಲಜ್ಜೇಶ್ವರ
೧೩೭. **ಗಂಗಾಂಬಿಕೆ** – ಗಂಗಾಪ್ರಿಯ ಕೂಡಲಸಂಗಮದೇವ
೧೩೮. **ನೀಲಾಂಬಿಕೆ** – ಸಂಗಯ್ಯ
೧೩೯. **ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ** – ಕುಂಭೇಶ್ವರಲಿಂಗ
೧೪೦. **ಗೊಗ್ಗವ್ವೆ** – ನಾಸ್ತಿನಾಥ
೧೪೧. **ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ** – ಗುರುಶಾಂತೇಶ್ವರ
೧೪೨. **ದುಗ್ಗಳೆ** – ದಾಸಯ್ಯಪ್ರಿಯ ರಾಮನಾಥ
೧೪೩. **ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ** – ನಿಂಬೇಶ್ವರ
೧೪೪. **ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ** – ಕಾಳೇಶ್ವರ
೧೪೫. **ಬೊಂತಾದೇವಿ** – ಬಿಡಾಡಿ
೧೪೬. **ಮುಕ್ತಾಯಕ್ಕ** – ಅಜಗಣ್ಣತಂದೆ
೧೪೭. **ಮೋಳಿಗೆ ಮಹಾದೇವಿ** – ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ

| | | | |
|---|---|---|---|
| ೧೪೮. | **ಅಮುಗೆ ರಾಯಮ್ಮ** | – | ಅಮುಗೇಶ್ವರಲಿಂಗ |
| ೧೪೯. | **ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ** | – | ಶ್ರೀಗುರುಸಿದ್ದೇಶ್ವರ |
| ೧೫೦. | **ಸತ್ಯಕ್ಕ** | – | ಶಂಭುಜಕ್ಕೇಶ್ವರ |
| ೧೫೧. | **ಸಿದ್ದಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ** | – | ಭೀಮೇಶ್ವರ |
| ೧೫೨. | **ಸೂಳೆ ಸಂಕವ್ವೆ** | – | ನಿರ್ಲಜ್ಜೇಶ್ವರ |
| ೧೫೩. | **ಹಡಪದ ಅಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ** | – | ಅಪ್ಪಣ್ಣಪ್ರಿಯ ಚೆನ್ನಬಸವಣ್ಣ |
| ೧೫೪. | **ಷಣ್ಮುಖ ಶಿವಯೋಗಿ** | – | ಅಖಂಡೇಶ್ವರ |
| ೧೫೫. | **ಕರಸ್ಥಲದ ಮಲ್ಲಿಕಾರ್ಜುನ** | – | ಪರಮಗುರು ಶಾಂತಮಲ್ಲಿಕಾರ್ಜುನ |
| ೧೫೬. | **ಕಾಡ ಸಿದ್ಧೇಶ್ವರ** | – | ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭು |
| ೧೫೭. | **ಕುಷ್ಟಗಿ ಕರಿಬಸವೇಶ್ವರ** | – | ಅಖಂಡ ಪರಿಪೂರ್ಣ ಘನಲಿಂಗ ಗುರು ಚೆನ್ನಬಸವಣ್ಣ |
| ೧೫೮. | **ಗಣದಾಸಿ ವೀರಣ್ಣ** | – | ಶಾಂತ ಕೂಡಲಸಂಗಮದೇವ |
| ೧೫೯. | **ಗುರುಸಿದ್ಧದೇವ** | – | ಸಂಗನ ಬಸವಣ್ಣ |
| ೧೬೦. | **ಗುಹೇಶ್ವರಯ್ಯ** | – | ಗೊಹೇಶ್ವರಪ್ರಿಯ ನಿರಾಳಲಿಂಗ |
| ೧೬೧. | **ಗೋಣಿ ಮಾರಯ್ಯ** | – | ಕೇಟೇಶ್ವರಲಿಂಗ |
| ೧೬೨. | **ಚನ್ನಯ್ಯ** | – | ಚನ್ನಯ್ಯಪ್ರಿಯ ನಿರ್ಮಾಯ ಪ್ರಭುವೇ |
| ೧೬೩. | **ಜಕ್ಕಣಯ್ಯ** | – | ಝೇಂಕಾರ ನಿಜಲಿಂಗ ಪ್ರಭುವೇ |
| ೧೬೪. | **ತೋಂಟದ ಸಿದ್ಧಲಿಂಗೇಶ್ವರರು** | – | ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ |
| ೧೬೫. | **ಘನಲಿಂಗದೇವರು** | – | ಘನಲಿಂಗಿಯ ಮೋಹದ ಮಲ್ಲಿಕಾರ್ಜುನ |
| ೧೬೬. | **ಸ್ವತಂತ್ರ ಸಿದ್ದಲಿಂಗೇಶ್ವರರು** | – | ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ |
| ೧೬೭. | **ಇಮ್ಮಡಿ ಗುರುಸಿದ್ಧಸ್ವಾಮಿ** | – | ಪರಮ ಶಿವಲಿಂಗೇಶ್ವರ |
| ೧೬೮. | **ದೇಶಿಕೇಂದ್ರ ಸಂಗನ ಬಸವಯ್ಯ** | – | ನಿರಂಜನ ಚನ್ನಬಸವಲಿಂಗ |
| ೧೬೯. | **ನಿರಾಲಂಬ ಪ್ರಭುದೇವರು** | – | ನಿಸ್ಸಂಗ ನಿರಾಳಃ ನಿಜಲಿಂಗು ಪ್ರಭು |
| ೧೭೦. | **ಪರಂಜ್ಯೋತಿ** | – | ವರನಾಗನ ಗುರುವೀರೇಶ ಪರಂಜ್ಯೋತಿ |
| ೧೭೧. | **ಬಸವಲಿಂಗದೇವರು** | – | ಶ್ರೀಗುರು ಸಿದ್ಧಲಿಂಗೇಶ್ವರ |
| ೧೭೨. | **ಮೂರುಸಾವಿರ ಮುಕ್ತಿಮುನಿ** | – | ಸಿದ್ಧಮಲ್ಲಿಕಾರ್ಜುನ ಲಿಂಗೇಶ್ವರ |
| ೧೭೩. | **ವೀರಣ್ಣದೇವರು** | – | ಮಹಾಘನ ಶಾಂತ ಮಲ್ಲಿಕಾರ್ಜುನ |
| ೧೭೪. | **ಸಂಗನ ಬಸವೇಶ್ವರ** | – | ಬಸವಲಿಂಗೇಶ್ವರ |
| ೧೭೫. | **ಸಿದ್ಧಮಲ್ಲಪ್ಪ** | – | ಮೇಲಣಗವಿಯ ಶ್ರೀ ಸಿದ್ಧೇಶ್ವರಪ್ರಭುವೇ |
| ೧೭೬. | **ಹೇಮಗಲ್ಲ ಹಂಪ** | – | ಪರಮಗುರು ಪಡುವಿಡಿಸಿದ್ಧಮಲ್ಲಿನಾಥ ಪ್ರಭುವೇ |
| ೧೭೭. | **ಸಿದ್ಧವೀರದೇಶಿಕೇಂದ್ರ** | – | ಶ್ರೀಗುರು ತೋಂಟದ ಸಿದ್ಧಲಿಂಗೇಶ್ವರ |

# ೨. ವಚನಕಾರರರ ಕುರಿತಾಗಿ ಹೆಚ್ಚಿನ ವಿಷಯಗಳು

| | | |
|---|---|---|
| ೧೭೮. | **ಬಸವಣ್ಣನವರ ಜನ್ಮಸ್ಥಳ** | – ಇಂಗಳೇಶ್ವರ ಬಾಗೇವಾಡಿ |
| ೧೭೯. | **ಬಸವಣ್ಣನವರ ಸಹೋದರಿ** | – ಅಕ್ಕನಾಗಮ್ಮ |
| ೧೮೦. | **ಬಸವಣ್ಣನವರ ತಂದೆ ತಾಯಿ** | – ಮಾದರಸ ಮಾದಲಾಂಬಿಕೆ |
| ೧೮೧. | **ಬಸವಣ್ಣನವರ ಸೋದರಳಿಯ** | – ಚನ್ನಬಸವಣ್ಣ |
| ೧೮೨. | **ಬಸವಣ್ಣನವರ ಸೋದರಮಾವ** | – ಬಲದೇವ |
| ೧೮೩. | **ಬಸವಣ್ಣನವರ ಜೀವನ ಸಂಗಾತಿಯರು** | – ಗಂಗಾಂಬಿಕೆ, ನೀಲಾಂಬಿಕೆ |
| ೧೮೪. | **ಬಸವಣ್ಣನವರ ಆರಂಭಿಕ ವೃತ್ತಿ** | – ಕರಣಿಕ |
| ೧೮೫. | **ಬಸವಣ್ಣನವರು ಸದಾ ನೆನೆಸುತ್ತಿದದ್ದು** | – ಕೂಡಲಸಂಗಮದೇವ |
| ೧೮೬. | **ಬಸವಣ್ಣನವರು ಅಮಾತ್ಯರಾಗಿದ್ದು** | – ಕಲಚೂರ್ಯ ಬಿಜ್ಜಳನಲ್ಲಿ |
| ೧೮೭. | **ಬಸವಣ್ಣನವರ ಮನೆ** | – ಮಹಾಮನೆ |
| ೧೮೮. | **ಬಸವಣ್ಣನವರು ಸ್ಥಾಪಿಸಿದ ಸಂಸ್ಥೆ** | – ಅನುಭವ ಮಂಟಪ |
| ೧೮೯. | **ಬಸವಣ್ಣನವರು ನೀಡಿದ ಕರೆ** | – ಕಾಯಕ ದಾಸೋಹ |
| ೧೯೦. | **ಬಸವಣ್ಣನವರು ಹರಳಯ್ಯನವರಿಗೆ ನುಡಿದ ನುಡಿ** | – ಶರಣು ಶರಣಾರ್ಥಿ |
| ೧೯೧. | **ಬಸವಣ್ಣನವರು ವಿಶ್ವದ ಮೊಟ್ಟ ಮೊದಲ** | – ಸಮಾಜವಾದಿ |
| ೧೯೨. | **ಬಸವಣ್ಣನವರ ಸಪ್ತಸೂತ್ರಗಳ ವಚನ** | – ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯಪಡಬೇಡ, ಮುನಿಯಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ |
| ೧೯೩. | **ಬಸವಣ್ಣನವರ ವಿನಯವಂತಿಕೆ ಸಾರುವ ವಚನ** | – ಹೊಗಳಿ ಹೊಗಳಿ ಎನ್ನ ಹೊನ್ನಶೂಲಕ್ಕಿಕ್ಕದಿರಿ |
| ೧೯೪. | **ಸ್ಥಾವರವನ್ನು ಖಂಡಿಸುವ ಅಣ್ಣನವರ ವಚನ** | – ಉಳ್ಳವರು ಶಿವಾಲಯವ ಮಾಡುವರು . . . . ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ. |
| ೧೯೫. | **ಬಸವಣ್ಣನವರ ಪ್ರಕಾರ ಧರ್ಮದ ಮೂಲ** | – ದಯವೇ ಧರ್ಮದ ಮೂಲವಯ್ಯ |
| ೧೯೬. | **ಗುಹೇಶ್ವರ ಅಂಕಿತದ ವಚನಕಾರ** | – ಅಲ್ಲಮಪ್ರಭು |
| ೧೯೭. | **ಮಾಯಾ ಕೋಲಾಹಲನಾದ ವಚನಕಾರ** | – ಅಲ್ಲಮಪ್ರಭು |
| ೧೯೮. | **ಸಿದ್ಧರಾಮನನ್ನು ಕಲ್ಯಾಣಕ್ಕೆ ಕರೆತಂದ ವಚನಕಾರ** | – ಅಲ್ಲಮಪ್ರಭು |
| ೧೯೯. | **ಅನುಭವ ಮಂಟಪದ ಅಧ್ಯಕ್ಷತೆ ವಹಿಸಿದ್ದ ವಚನಕಾರ** | – ಅಲ್ಲಮಪ್ರಭು |
| ೨೦೦. | **ಶೂನ್ಯಸಿಂಹಾಸನದ ಪ್ರಥಮ ಅಧ್ಯಕ್ಷ** | – ಅಲ್ಲಮಪ್ರಭು |
| ೨೦೧. | **ಎತ್ತಣ ಮಾಮರ ಎತ್ತಣ ಕೋಗಿಲೆ ಎಂದು ಹಾಡಿದ ವಚನಕಾರ** | – ಅಲ್ಲಮಪ್ರಭು |
| ೨೦೨. | **ಬೆಡಗಿನ ವಚನಕಾರ** | – ಅಲ್ಲಮಪ್ರಭು |

೨೦೩. **ಪ್ರಭುಲಿಂಗಲೀಲೆಯ ಕಥಾನಾಯಕ** – ಅಲ್ಲಮಪ್ರಭು

೨೦೪. **ಮದ್ದಲೆಯ ಅಲ್ಲಮನ ಜನ್ಮಸ್ಥಳ** – ಕರ್ನಾಟಕದ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ

೨೦೫. **ಮದ್ದಲೆಯ ಮಾಯಾಕೋಲಾಹಲ** – ಅಲ್ಲಮಪ್ರಭು

೨೦೬. **'ವ್ಯೋಮ ಮೂರುತಿ' ಎಂದು ಬಣ್ಣಿತನಾದ ವಚನಕಾರ** – ಅಲ್ಲಮಪ್ರಭು

೨೦೭. **ಅಲ್ಲಮನ ಗುರು** – ಅನಿಮಿಷದೇವ

೨೦೮. **ಅಲ್ಲಮಪ್ರಭುಗಳ ಕೊನೆಯ ದಿನಗಳ ಸ್ಥಳ** – ಶ್ರೀಶೈಲದ ಕದಳಿ

೨೦೯. **ಅಲ್ಲಮನ ಕುರಿತಾಗಿ ಚಾಮರಸನ ಪ್ರಸಿದ್ಧ ಮಾತು** – 'ಆತನಲ್ಲಮ ಸಕಲಸಮಯ ಪ್ರೀತ'

೨೧೦. **ವಚನ ಸಂಪುಟದಲ್ಲಿ ಪ್ರಕಟವಾಗಿರುವ ಅಲ್ಲಮನ ಒಟ್ಟು ವಚನಗಳು** – ೧೬೩೬

೨೧೧. **ಮುಕ್ತಾಯಕ್ಕನಿಗೆ ಸಾಂತ್ವನ ಹೇಳಿದ ವಚನಕಾರ** – ಅಲ್ಲಮಪ್ರಭು

೨೧೨. **ಅನುಭವಮಂಟಪದಲ್ಲಿ ಮಹಾದೇವಿಯಕ್ಕನನ್ನು ಪರಿಪರಿಯಾಗಿ ಕಾಡಿದ ವಚನಕಾರ** – ಅಲ್ಲಮಪ್ರಭು

೨೧೩. **ಅಲ್ಲಮನನ್ನು ಕುರಿತು ಚಾಮರಸ ಬರೆದಿರುವ ಪ್ರಸಿದ್ಧ ಕಾವ್ಯ** – ಪ್ರಭುಲಿಂಗಲೀಲೆ

೨೧೪. **ವಚನಧರ್ಮ ಸಂವಿಧಾನದ ಶಿಲ್ಪಿ** – ಚನ್ನಬಸವಣ್ಣ

೨೧೫. **ಷಟ್ಸ್ಥಲ ಚಕ್ರವರ್ತಿ ಎಂದು ಕರೆಯಲ್ಪಟ್ಟ ವಚನಕಾರ** – ಚನ್ನಬಸವಣ್ಣ

೨೧೬. **ಚಿಕ್ಕದಣ್ಣಾಯಕ ಎಂದು ಪ್ರೀತಿಯಿಂದ ಕರೆಯಲ್ಪಟ್ಟವರು** – ಚನ್ನಬಸವಣ್ಣ

೨೧೭. **ಚನ್ನಬಸವಣ್ಣನನ್ನು ಕುರಿತ ಪ್ರಸಿದ್ಧ ಕಾವ್ಯ** – ಚೆನ್ನಬಸವಪುರಾಣ

೨೧೮. **ಚೆನ್ನಬಸವಪುರಾಣವನ್ನು ಬರೆದವರು** – ವಿರೂಪಾಕ್ಷ ಪಂಡಿತ

೨೧೯. **ಚೆನ್ನಬಸವಣ್ಣನಿಂದ ದೀಕ್ಷೆ ಪಡೆದ ಪ್ರಸಿದ್ಧ ವಚನಕಾರ** – ಸಿದ್ಧರಾಮ

೨೨೦. **ಚೆನ್ನಬಸವಣ್ಣನ ತಂದೆ ತಾಯಿಗಳು** – ಶಿವದೇವ ಮತ್ತು ಅಕ್ಕನಾಗಮ್ಮ

೨೨೧. **ಚೆನ್ನಬಸವಣ್ಣನ ಐಕ್ಯಸ್ಥಳ** – ಉಳವಿ

೨೨೨. **ಚೆನ್ನಬಸವಣ್ಣನವರ ಇತರ ರಚನೆಗಳು** – ಕರಣ ಹಸಿಗೆ, ಮಿಶ್ರಾರ್ಪಣ, ಹಿರಿಯ ಮಂತ್ರಗೋಪ್ಯ, ಪದಮಂತ್ರಗೋಪ್ಯ, ಸಕೀಲ

೨೨೩. **ಚೆನ್ನಬಸವಣ್ಣನವರ ಲಭ್ಯವಿರುವ ವಚನಗಳ ಸಂಖ್ಯೆ** – ೧೭೬೩

೨೨೪. **ಸೊನ್ನಲಿಗೆಯ ಸಿದ್ಧಪುರುಷ** – ಸಿದ್ಧರಾಮ

೨೨೫. **ಮಲಯ್ಯನನ್ನು ಅರಸುತ್ತ ಹೊರಟವ** – ಸಿದ್ಧರಾಮ

೨೨೬. **ಸಿದ್ಧರಾಮನ ಹುಟ್ಟು ಹೆಸರು** – ಧೂಳಿಮಾಕಾಳ

೨೨೭. **ಬಾಲಕ ಸಿದ್ಧರಾಮನ ಮೊದಲ ಕಾಯಕ** – ದನಗಳನ್ನು ಕಾಯುವುದು

೨೨೮. **ಸಿದ್ಧರಾಮನ ಶ್ರೀಗಿರಿ** – ಶ್ರೀಶೈಲ

೨೨೯. ಸಿದ್ದರಾಮನ ಲೋಕೋಪಯೋಗಿ ಕಾರ್ಯಗಳು – ಕೆರೆಕಟ್ಟೆ ಕಟ್ಟಿಸುವುದು, ದೇಗುಲ ನಿರ್ಮಿಸುವುದು, ಲಿಂಗಪ್ರತಿಷ್ಠೆ, ಸಾಮೂಹಿಕ ವಿವಾಹ ನಡೆಸುವುದು

೨೩೦. ಕರ್ಮಯೋಗಿ ಬಿರುದಾಂಕಿತರಾಗಿ ಶಿವಯೋಗಿಯಾದವರು – ಸಿದ್ದರಾಮ

೨೩೧. ಕರ್ಮಯೋಗಿಯನ್ನು ಶಿವಯೋಗಿಯಾಗಿ ಪರಿವರ್ತಿಸಿದವರು – ಅಲ್ಲಮಪ್ರಭು

೨೩೨. ಸಿದ್ದರಾಮರ ಕುರಿತಾಗಿ ಇರುವ ಪ್ರಸಿದ್ಧ ಕಾವ್ಯಗಳು – ಸಿದ್ಧರಾಮ ಚಾರಿತ್ರ್ಯ, ಸಿದ್ಧರಾಮ ಪುರಾಣ

೨೩೩. ಸಿದ್ಧರಾಮರ ಲಭ್ಯ ವಚನಗಳು – ೧೯೯೨

೨೩೪. ಕಿಳ್ಳಿಕೇತರ ಆಟವನ್ನು ಪ್ರದರ್ಶಿಸುತ್ತಿದ್ದ ವಚನಕಾರ – ಕಲಕೇತಯ್ಯ

೨೩೫. ಕಿನ್ನರಿ ನುಡಿಸುವ ಕಾಯಕವನ್ನೊತ್ತ ವಚನಕಾರ – ಕಿನ್ನರಿ ಬ್ರಹ್ಮಯ್ಯ

೨೩೬. ಕೂಗಿನ ಕಾಯಕದ ಮೂಲಕ ಶರಣರನ್ನೆಚ್ಚರಿಸುತ್ತಿದ್ದ ವಚನಕಾರ – ಕೂಗಿನ ಮಾರಯ್ಯ

೨೩೭. ಚಿತ್ರದ ಜಂಗಮವನ್ನು ಇರಿದವನನ್ನು ಇರಿದ ಕಥೆಯನ್ನೊತ್ತ ವಚನಕಾರ – ಕೋಲಶಾಂತಯ್ಯ

೨೩೮. ವಜ್ರದೇಹಿಯಾಗಿ ಅಲ್ಲಮನಿಂದ ಭಂಗಿತನಾಗಿ ವಚನಕಾರನಾದವನು – ಗೋರಕ್ಷ

೨೩೯. ಮದ್ದಲೆಯ ನುಡಿಸುತ್ತಾ ನರ್ತಿಸುತ್ತಾ ಶಿವಾನುಭವ ಸಾರುತ್ತಿದ್ದ ವಚನಕಾರ – ಘಟ್ಟಿವಾಳಯ್ಯ

೨೪೦. ಆದ್ಯ ವಚನಕಾರ ಎಂದು ಪ್ರಸಿದ್ಧನಾದವನು – ಜೇಡರ ದಾಸಿಮಯ್ಯ

೨೪೧. ದಾಸಿಮಯ್ಯನ ಸತಿ ಯಾರು – ದುಗ್ಗಳೆ

೨೪೨. ದಾಸಿಮಯ್ಯನ ಕಾಯಕವಾವುದು – ನೇಯ್ಗೆ

೨೪೩. ತಳವಾರದ ಕಾಯಕದ ವಚನಕಾರ – ತಳವಾರ ಕಾಮಿದೇವಯ್ಯ

೨೪೪. ಗೋವಳಿಗನಾದರೂ ಶ್ರೇಷ್ಟ ಅನುಭಾವಿಯಾದ ವಚನಕಾರ – ತುರುಗಾಹಿ ರಾಮಣ್ಣ

೨೪೫. ೧೨ನೆಯ ಶತಮಾನದ ಹಾಸ್ಯಗಾರ ಈ ವಚನಕಾರ – ನಗೆಯ ಮಾರಿತಂದೆ

೨೪೬. ಕಾಯಕದಲ್ಲಿ ನಿರತನಾಗಿ ಇಷ್ಟಲಿಂಗವನ್ನೇ ಧಿಕ್ಕರಿಸುವ ವಚನಕಾರ – ನುಲಿಯ ಚಂದಯ್ಯ

೨೪೭. ಹುಲ್ಲಿನಿಂದ ಹಗ್ಗ, ಕಣ್ಣಿ ಹೊಸೆದು ಮಾರುವ ಕಾಯಕವನ್ನೊತ್ತ ವಚನಕಾರ – ನುಲಿಯ ಚಂದಯ್ಯ

೨೪೮. ಬಹುರೂಪಿ ಕಾಯಕದ ಜನಪದ ಕಲಾವಿದ – ಬಹುರೂಪಿ ಚೌಡಯ್ಯ

೨೪೯. ಸರಕು ಸಾಗಿಸುವ ಕಾಯಕದ ವಚನಕಾರ – ಬಳ್ಳೇಶ ಮಲ್ಲಯ್ಯ

೨೫೦. ಬಡಗಿ ಕಾಯಕದ ವಚನಕಾರ – ಬಾಚಿ ಕಾಯಕದ ಬಸವಣ್ಣ

೨೫೧. ತೋಟಗಾರಿಕೆ ವೃತ್ತಿಯ ವಚನಕಾರ – ಬಾಹೂರ ಬೊಮ್ಮಣ್ಣ

೨೫೨. ಬೊಕ್ಕಸದ ಅಧಿಕಾರಿಯಾಗಿದ್ದ ವಚನಕಾರ – ಬೊಕ್ಕಸದ ಚಿಕ್ಕಣ್ಣ

೨೫೩. ಬಟ್ಟೆಗಳನ್ನು ಮಡಿ ಮಾಡುವ ಕಾಯಕಜೀವಿ – ಮಡಿವಾಳ ಮಾಚಿದೇವ

೨೫೪. ಕಲ್ಯಾಣ ಕ್ರಾಂತಿಯಲ್ಲಿ ಮಾಚಿದೇವರ ಪಾತ್ರ – ಶರಣರ ರಕ್ಷಣೆ, ಸೇನಾ ದಂಡನಾಯಕನಾಗಿ ಹೋರಾಟ

೨೫೫. ವೀರಮಾಹೇಶ್ವರ ನಿಷ್ಠೆಯ ವಚನಕಾರ – ಮಡಿವಾಳ ಮಾಚಿದೇವ

೨೫೬. ವೀರ ಗಣಾಚಾರಿ ಎಂದು ಖ್ಯಾತನಾದ ವಚನಕಾರ – ಮಡಿವಾಳ ಮಾಚಿದೇವ

೨೫೭. ಗುಪ್ತಭಕ್ತಿಗೆ ಪ್ರಸಿದ್ಧರಾದ ವಚನಕಾರ – ಮರುಳಶಂಕರದೇವರು

೨೫೮. ಲೋಹಕಾರ್ಯ ಮಾಡುವ ವಚನಕಾರ – ಮಲಹರ ಕಾಯಕದ ಚಿಕ್ಕದೇವಯ್ಯ

೨೫೯. ಕರಿಕಾಲಚೋಳನಲ್ಲಿ ಕುದುರೆಗಳಿಗೆ ಹುಲ್ಲು ಹಾಕುತ್ತಿದ್ದ ಈ ವಚನಕಾರ ಕಲ್ಯಾಣದಲ್ಲಿ ಪಾದರಕ್ಷೆ ಹೊಲಿಯುವ ಕಾಯಕ ಮಾಡುತ್ತಿದ್ದವ – ಮಾದಾರ ಚೆನ್ನಯ್ಯ

೨೬೦. ಬಿದಿರಿನಿಂದ ಮೊರ ಬುಟ್ಟಿ ತೊಟ್ಟಿಲುಗಳನ್ನು ಹೆಣೆಯುತ್ತಿದ್ದ ವಚನಕಾರ – ಮೇದರ ಕೇತಯ್ಯ

೨೬೧. ಪಾರ್ವತಿಪರಮೇಶ್ವರರೇ ತನ್ನ ಅಕ್ಕಭಾವರೆಂದು ಭಾವಿಸಿದ ವಚನಕಾರ – ಮೈದುನ ರಾಮಯ್ಯ

೨೬೨. ಇವರು ಕಾಶ್ಮೀರದ ರಾಜರು, ಕಲ್ಯಾಣದಲ್ಲಿ ವಚನಕಾರರು – ಮೋಳಿಗೆ ಮಾರಯ್ಯ

೨೬೩. ಕಟ್ಟಿಗೆಯ ಕಾಯಕ ಜೀವಿ – ಮೋಳಿಗೆ ಮಾರಯ್ಯ

೨೬೪. ಪತ್ರಗಳನ್ನು ಮುಟ್ಟಿಸುವ ನಿಯೋಗಿ ಈ ವಚನಕಾರ – ರಾಯಸದ ಮಂಚಣ್ಣ

೨೬೫. ವಚನಗಳನ್ನು ಬರೆದು ಸಂಗ್ರಹಿಸುತ್ತಿದ್ದ ವಚನಕಾರ – ವಚನಭಂಡಾರಿ ಶಾಂತರಸ

೨೬೬. ಕುರಿ ಕಾಯುವ ಕಾಯಕ ಜೀವಿ – ವೀರ ಗೊಲ್ಲಾಳ(ಕುರುಬ ಗೊಲ್ಲಾಳ)

೨೬೭. ಭವಿಯನ್ನು ಮುಟ್ಟಬಾರದೆಂಬ ವೀರವ್ರತಧಾರಿ – ವೀರಶಂಕರದಾಸಿಮಯ್ಯ

೨೬೮. ವಚನಕಾರರಲ್ಲಿ ಈತ ವೈದ್ಯಶಾಸ್ತ್ರ ಪಾರಂಗತ – ವೈದ್ಯ ಸಂಗಣ್ಣ

೨೬೯. ಶಿವನಿಂದ ಹಣೆಗಣ್ಣು ಪಡೆದ ಖ್ಯಾತಿಯ ವಚನಕಾರ – ಶಂಕರದಾಸಿಮಯ್ಯ

೨೭೦. ಬೆರಳಿನ ತುದಿಯಿಂದ ಹಾಲು ಸುರಿಸಿದ ವಚನಕಾರ – ಶಿವನಾಗಮಯ್ಯ

೨೭೧. ಸಂಗೀತಜ್ಞನಾದ ಪರಮಶಿವಭಕ್ತ ವಚನಕಾರ – ಸಕಳೇಶ ಮಾದರಸ

೨೭೨. ಪಂಜು ಹಿಡಿಯುತ್ತಿದ್ದ ವಚನಕಾರ – ಸತ್ತಿಗೆ ಕಾಯಕದ ಮಾರಯ್ಯ

೨೭೩. ಸುಂಕಿಗ ವೃತ್ತಿಯ ವಚನಕಾರ – ಸುಂಕದ ಬಂಕಣ್ಣ

೨೭೪. ಬಟ್ಟೆ ಹೊಲಿಯುವ ಕಾಯಕದ ವಚನಕಾರ – ಸೂಜಿಕಾಯಕದ ರಾಮಿತಂದೆ

೨೭೫. ಬಸವಣ್ಣನವರಂತೆ ಕರಣಿಕ ವೃತ್ತಿಯಲ್ಲಿದ್ದ ವಚನಕಾರ – ಸೊಡ್ಡಳ ಬಾಚರಸ

೨೭೬. ಬಸವಣ್ಣನವರ ಆಪ್ತ ಸಹಾಯಕ – ಹಡಪದ ಅಪ್ಪಣ್ಣ

೨೭೭. ಅಪ್ಪಣ್ಣನವರ ವೃತ್ತಿ – ವಚನಕಾರರಿಗೆ ತಾಂಬೂಲ ಸೇವೆ

೨೭೮. ಹಡಪದ ಅಪ್ಪಣ್ಣನವರ ಧರ್ಮಪತ್ನಿ – ಲಿಂಗಮ್ಮ

೨೭೯. ಕೊನೆಯವರೆಗೂ ಬಸವಣ್ಣನವರ ಅನುವರ್ತಿಯಾಗಿದ್ದ ವಚನಕಾರ – ಹಡಪದ ಅಪ್ಪಣ್ಣ

೨೮೦. ಹುಲ್ಲು ಮಾರುವ ಕಾಯಕ ಮಾಡುತ್ತಿದ್ದ ವಚನಕಾರ – ಹೊಡೆಹುಲ್ಲ ಬಂಕಣ್ಣ

೨೮೧. ತನ್ನ ಹೆಸರನ್ನೇ ವಚನಾಂಕಿತವನ್ನಾಗಿಸಿಕೊಂಡಿರುವವ – ಅಂಬಿಗರ ಚೌಡಯ್ಯ

೨೮೨. ಬಡತನಕ್ಕೆ ಉಂಬುವ ಚಿಂತೆ, ಉಡಲಾದರೆ ಉಡುವ ಚಿಂತೆಯ ಸಮಾಜವನ್ನು ಕಂಡ ವಚನಕಾರ – ಅಂಬಿಗರ ಚೌಡಯ್ಯ

೨೮೩. ಪೆದ್ದಣ್ಣನನ್ನು ಉರಿಲಿಂಗಪೆದ್ದಿಯಾಗಿ ಪರಿವರ್ತಿಸಿದವರು – ಉರಿಲಿಂಗದೇವ

೨೮೪. ಸೌರಾಷ್ಟ್ರದಿಂದ ಪುಲಿಗೆರೆಗೆ ಬಂದ ಶರಣ – ಆದಯ್ಯ

೨೮೫. ಸಂಸ್ಕೃತದಲ್ಲಿ ವಿಶೇಷ ಪಾಂಡಿತ್ಯ ಹೊಂದಿದ್ದ ದಲಿತ ವಚನಕಾರ – ಉರಿಲಿಂಗಪೆದ್ದಿ

೨೮೬. ಅಕ್ಕಿಯಾಯ್ದು ಶರಣ ಸಂತರ್ಪಣೆ ಮಾಡುತ್ತಿದ್ದ ದಂಪತಿಗಳು – ಆಯ್ದಕ್ಕಿಲಕ್ಕಮ್ಮ – ಮಾರಯ್ಯ

೨೮೭. ಅಬ್ಬಲೂರು ಶಾಸನದಲ್ಲಿ ಉಕ್ತಿಯಾಗಿರುವ ವಚನಕಾರ – ಏಕಾಂತದ ರಾಮಯ್ಯ

೨೮೮. ಬಸವಣ್ಣನ ಮನೆಯ ಮುಸುರೆ ಗಡಿಗೆಗೆ ಮುತ್ತುವ ನೊಣಗಳು ಎಂದು ಕಪಟಿ ಜಂಗಮರನ್ನು ಕರೆದ ವಚನಕಾರ – ಘಟ್ಟಿವಾಳಯ್ಯ

೨೮೯. ಬಸವಣ್ಣನಿಗೆ ನೆರಳಾಗಿ ಉದ್ದಕ್ಕೂ ನಿಂತ ವಚನಕಾರ್ತಿ – ಅಕ್ಕನಾಗಮ್ಮ

೨೯೦. ಕನ್ನಡದ ಅಕ್ಕ ಎಂದು ಹೆಸರಾದ ವಚನಕಾರ್ತಿ – ಅಕ್ಕಮಹಾದೇವಿ

೨೯೧ ಚನ್ನಬಸವಣ್ಣನ ತಾಯಿ ಶರಣಕುಲಕ್ಕೆ ನೆರಳಾಗಿ ನಿಂತಳು – ಅಕ್ಕನಾಗಮ್ಮ

೨೯೨. ವಚನ ಸಾಹಿತ್ಯ ಸಂರಕ್ಷಣೆಯಲ್ಲಿ ಈಕೆಯ ಸೇವೆ ದೊಡ್ಡದು – ಅಕ್ಕನಾಗಮ್ಮ

೨೯೩. ವಚನ ಸಾಹಿತ್ಯವೆಂದಾಕ್ಷಣ ಸ್ತ್ರೀಯರಲ್ಲಿ ಮೊದಲು ನೆನಪಾಗುವ ಹೆಸರು – ಅಕ್ಕಮಹಾದೇವಿ

೨೯೪. ವೀರವಿರಾಗಿಣಿ ಎಂದು ಹೆಸರಾದವಳು – ಅಕ್ಕಮಹಾದೇವಿ

೨೯೫. ಮಹಾದೇವಿಯಕ್ಕನ ಜನ್ಮಸ್ಥಳ – ಉಡುತಡಿ, ಶಿಕಾರಿಪುರ ತಾಲ್ಲೂಕು ಶಿವಮೊಗ್ಗ ಜಿಲ್ಲೆ.

೨೯೬. ಅಕ್ಕನ ಒಟ್ಟು ಲಭ್ಯ ವಚನಗಳು – ೪೩೪

೨೯೭. ಅಕ್ಕನ ಇತರ ರಚನೆಗಳು – ಯೋಗಾಂಗ ತ್ರಿವಿಧಿ, ಸ್ವರವಚನ, ಸೃಷ್ಟಿಯ ವಚನ, ಮಂತ್ರಗೋಪ್ಯ

೨೯೮. ಮಹಾದೇವಿಯಕ್ಕ ಐಕ್ಯಳಾದ ಸ್ಥಳ – ಕದಳಿ

೨೯೯. ವಚನ ಚಳವಳಿಯ ಅಪೂರ್ವ ಅಣ್ಣತಂಗಿಯರು – ಅಜಗಣ್ಣ ಮುಕ್ತಾಯಕ್ಕ

೩೦೦. ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬುದ ಸಾರಿದ ಅನ್ವರ್ಥಕ ದಂಪತಿಗಳು – ದುಗ್ಗಳೆ ದಾಸಿಮಯ್ಯ

೩೦೧. ಧೂಪದ ಕಾಯಕವನ್ನೊತ್ತ ವಚನಕಾರ್ತಿ – ಗೊಗ್ಗವ್ವೆ

೩೦೨. ಮಾಂಡವ್ಯಪುರದ ರಾಜಕುವರಿ ಕಲ್ಯಾಣಕ್ಕೆ ಬಂದಳು – ಬೊಂತಾದೇವಿ

೩೦೩. ದಲಿತ ವಚನಕಾರ್ತಿ – ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

೩೦೪. ಅಲ್ಲಿರುವ ಸಂಗಯ್ಯ ಇಲ್ಲಿಹನೇ? ಎಂದು ಪ್ರಶ್ನಿಸಿದ ವಚನಕಾರ್ತಿ – ನೀಲಾಂಬಿಕೆ

೩೦೫. ಮಹಾಮನೆಯ ಒಡತಿಯರು – ಗಂಗಾಂಬಿಕೆ ನೀಲಾಂಬಿಕೆ

೩೦೬. ಕಾಶ್ಮೀರದ ರಾಜನ ಅರಸಿ ಈ ವಚನಕಾರ್ತಿ – ಮೋಳಿಗೆ ಮಹಾದೇವಿ

೩೦೭. ವಿಪ್ರಮಂತ್ರಿ ದಲಿತರೊಡನೆ ಸಂಬಂಧ ಬೆಳೆಸಿದ ಧೀರ – ಮಧುವರಸ

೩೦೮. ಕಲ್ಯಾಣ ಕ್ರಾಂತಿಗೆ ನೆಪಮಾತ್ರರು – ಮಧುವರಸ ಹರಳಯ್ಯ

೩೦೯. ಕಲ್ಯಾಣ ಕ್ರಾಂತಿಯ ನವದಂಪತಿಗಳು – ಕಲ್ಯಾಣಿ ಶೀಲವಂತ

೩೧೦. ಭವಸಾಗರವನ್ನು ದಾಟಿಸುತ್ತೇನೆ ಬನ್ನಿ ಎಂದ ವಚನಕಾರ – ಅಂಬಿಗರ ಚೌಡಯ್ಯ

## ೩. ವಚನಗಳು ಮತ್ತು ವಚನಕಾರರು

೩೧೧. ಶಿಲೆಯೊಳಗಣ ಪಾವಕನಂತೆ . . . . ಶಬ್ದದೊಳಗಣ ನಿಶ್ಶಬ್ದದಂತೆ
ಎಂದು ಶರಣ ಸಂಬಂಧವನ್ನು ಹೇಳಿದ ವಚನಕಾರ – **ಅಲ್ಲಮಪ್ರಭು**

೩೧೨. ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ
ಭ್ರಾಂತಿನ ಬೇರನ್ನು ಅಗೆದು ತೆಗೆದ ವಚನಕಾರ – **ಅಲ್ಲಮಪ್ರಭು**

೩೧೩. ಕೃತಯುಗದಲ್ಲಿ ಶ್ರೀಗುರುಶಿಷ್ಯಂಗೆ ಬಡಿದು ಬುದ್ದಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ ಎಂದು ಹೇಳುತ್ತಾ
ಕಾಲದ ಕಟ್ಟಳೆಯ ಕಲಿತನಕ್ಕೆ ಬೆರಗಾದ ವಚನಕಾರ – **ಅಲ್ಲಮಪ್ರಭು**

೩೧೪. ಹೊನ್ನು ಹೆಣ್ಣು ಮಣ್ಣು ಮಾಯೆಯಲ್ಲ,
ಮನದ ಮುಂದಣ ಆಸೆಯೇ ಮಾಯೆ ಎಂದು ವಿಶ್ಲೇಷಿಸಿದ ವಚನಕಾರ – **ಅಲ್ಲಮಪ್ರಭು**

೩೧೫. ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಎಂದು ಹೇಳುತ್ತಾ
ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು.. . .ನಾ ನಿಮ್ಮ ನಂಬಿ
ಬಯಲಾದೆ ಎಂದು ಆತ್ಮನಿರೀಕ್ಷಣೆ ಮಾಡಿಕೊಳ್ಳುವ ವಚನಕಾರ – **ಅಲ್ಲಮಪ್ರಭು**

೩೧೬. ಮೂರರಲ್ಲಿ ಮುಟ್ಟಲಿಲ್ಲ, ಆರರಲ್ಲಿ ತೋರಲಿಲ್ಲ. ಎಂಟರಲ್ಲಿ ಕಂಡುದಿಲ್ಲ
ಎನ್ನುತ್ತಾ ಕಾಯದಲ್ಲಿ ಅಳಿದುದಿಲ್ಲ ಜೀವದಲ್ಲಿ ಉಳಿದಿಲ್ಲ ಎಂದು ಲಿಂಗವು
ಶಬ್ಧಕ್ಕೆ ಬಂದುದಿಲ್ಲ ಎನ್ನುವ ವಚನಕಾರ – **ಅಲ್ಲಮಪ್ರಭು**

೩೧೭. ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು ಎಂದು ಹಾಡುತ್ತಾ
ಸಂಗನ ಬಸವನ ಕಂಡು ಬದುಕಿದೆನು ಕಾಣಾ ಎಂದ ವಚನಕಾರ – **ಅಲ್ಲಮಪ್ರಭು**

೩೧೮. ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ ಅವು ಜಗಕ್ಕಿಕ್ಕಿದ ವಿಧಿ
ನಿನ್ನ ಒಡವೆ ಎಂಬುದು ಜ್ಞಾನರತ್ನ ಎಂದು ತಿಳಿಹೇಳಿದ ವಚನಕಾರ – **ಅಲ್ಲಮಪ್ರಭು**

೩೧೯. ಮಣಿಯನೆಣಿಸಿ ಕಾಲವ ಕಳೆಯಬೇಡ, ಕಣಿಯ ಪೂಜಿಸಿ
ದಿನವ ಕಳೆಯಬೇಡ ಎಂದು ಝೇಂಕಿಸಿ ಕ್ಷಣವಾದಡೆಯೂ ಆಗಲಿ
ನಿಜದ ನೆನಹೆ ಸಾಕು ಎಂದು ಅರುಹಿದ ವಚನಕಾರ – **ಅಲ್ಲಮಪ್ರಭು**

೩೨೦. ಶಿವ ಗುರುವೆಂದು ಬಲ್ಲಾತನೇ ಗುರು ಎಂದು ಬಣ್ಣಿಸುತ್ತಾ
ಸಂಗನಬಸವಣ್ಣನು ಎನಗೆಯೂ ಗುರು ನಿನಗೆಯೂ ಗುರು
ಜಗವೆಲ್ಲಕ್ಕೆಯೂ ಗುರು ಕಾಣಾ ಎಂದು ವಚನಕಾರ – **ಅಲ್ಲಮಪ್ರಭು**

೩೨೧. ಫಲದೊಳಗಣ ಮಧುರಗೋಪ್ಯದಂತಿದ್ದಿತ್ತು, ಚಂದ್ರಕಾಂತದ ಉದಕದ ತೆರನಂತಿದ್ದಿತ್ತು,
ಮಯೂರನ ತತ್ತಿಯ ಚಿತ್ರದಂತಿದ್ದಿತ್ತು, ಶಿಶು ಕಂಡ ಕನಸಿನ ಪರಿಯಂತಿದ್ದಿತ್ತು,
ನಿಮ್ಮ ನಿಲುವು ಸದ್ಗುರುಚಿತ್ತದ ಪದದಂತಿತ್ತು ಎಂದು ಭಾವಗೀತೆಯೋಪಾದಿಯಲ್ಲಿ
ಹಾಡಿದ ವಚನಕಾರ – **ಚೆನ್ನಬಸವಣ್ಣ**

೩೨೨. ಸೋಮವಾರ ಮಂಗಳವಾರ ಶಿವರಾತ್ರಿಯೆಂದು ಮಾಡುವ ಭಕ್ತರ ಲಿಂಗಭಕ್ತಂಗೆ
ನಾನೆಂತು ಸರಿಯೆಂಬೆನಯ್ಯಾ? ದಿನ ಶ್ರೇಷ್ಠವೋ? ಲಿಂಗಶ್ರೇಷ್ಠವೋ?
ದಿನಶ್ರೇಷ್ಟವೆಂದು ಮಾಡುವ ಪಂಚಮಹಾಪಾತಕರ ಮುಖವ ನೋಡಲಾಗದು
ಎಂದು ಕಟುನುಡಿಯನ್ನಾಡಿದ ವಚನಕಾರ – **ಚೆನ್ನಬಸವಣ್ಣ**

೩೨೩. ಉಂಬುದು ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರ ಎಂಬ
ಅನಾಚಾರಿಯ ಮಾತ ಕೇಳಲಾಗದು, ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರೆಲ್ಲ ಒಂದೆ ಎಂದು ಕೊಟ್ಟು ಕೊಂಬುದು ಸದಾಚಾರ, ಉಳಿದುದೆಲ್ಲ ಅನಾಚಾರ
ಎಂದು ಸ್ಪಷ್ಟವಾಗಿ ಹೇಳಿದ ವಚನಕಾರ – **ಚೆನ್ನಬಸವಣ್ಣ**

೩೨೪. ಹಲವು ದೈವಂಗಳ ಪೂಜೆಯ ಮಾಡುವ ಗೊರವನ ಗುರುದೇವನೆಂದು ನುಡಿದು ಕರೆವ
ವಿವೇಕವಿಹೀನ ದುರಾಚಾರಿಯ ಮುಖವ ನೋಡಲಾಗದು ಎಂದು ಹೇಳಿದ ವಚನಕಾರ – **ಚೆನ್ನಬಸವಣ್ಣ**

೩೨೫. ಶಾಸ್ತ್ರವೆಂಬುದು ಮನ್ಮಥಶಾಸ್ತ್ರವಯ್ಯಾ, ವೇದಾಂತವೆಂಬುದು ಮೂಲ ಮನೋವ್ಯಾಧಿಯಯ್ಯಾ,
ಪುರಾಣವೆಂಬುದು ಮೃತರಾದವರ ಗಿರಾಣವಯ್ಯಾ, ತರ್ಕವೆಂಬುದು ಯೋಗದ ಘೋರವಯ್ಯಾ,
ಇತಿಹಾಸವೆಂಬುದು ರಾಜರ ಕಥಾಭಾಗವಯ್ಯಾ, ಸ್ಮೃತಿಯೆಂಬುದು ಪಾಪಪುಣ್ಯ ವಿಚಾರವಯ್ಯಾ,
ಆದ್ಯರ ವಚನವೆಂಬುದು ಬಹುವೇದ್ಯವಯ್ಯಾ ಎಂದು ಸಾರಿ ಹೇಳಿದ ವಚನಕಾರ – **ಸಿದ್ಧರಾಮ**

೩೨೬. ಎಮ್ಮ ವಚನದೊಂದು ಪಾರಾಯಣಕ್ಕೆ ವ್ಯಾಸನದೊಂದು ಪುರಾಣ ಸಮ ಬಾರದಯ್ಯಾ,
ಎಮ್ಮ ವಚನದ ನೂರೆಂಟರಧ್ಯಯನಕ್ಕೆ ಶತರುದ್ರೀಯಯಾಗ ಸಮಬಾರದಯ್ಯಾ,
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ ಗಾಯತ್ರಿ ಲಕ್ಷ ಜಪ ಸಮ ಬಾರದಯ್ಯ
ಎಂದು ಖಡಾಖಂಡಿತವಾಗಿ ಹೇಳಿದ ವಚನಕಾರ – **ಸಿದ್ಧರಾಮ**

೩೨೭. ಉಂಡು ಉಂಡು ಹೋಗುವವರ ನೋಡಿ ನೋಡಿ ನಾಚಿತ್ತಯ್ಯ ಎನ್ನ ಮನ
ಎಂದು ಹೇಳುತ್ತಾ ಉಣದೆ ಎಡಹದೆ ಹೋದಡೆ ಅವರೇ
ಬಸವಾದಿ ಪ್ರಮಥರೆಂಬೆ ಎಂದು ಸಾರಿದ ವಚನಕಾರ – **ಸಿದ್ಧರಾಮ**

೩೨೮. ಅಂಕುಸದರಳಿನ ಸಂಪಗೆಯ ಹುವ್ವಿನ ಕಂಪು ! ಇತ್ತಲಿತ್ತ ಬಿಜಯಂಗೈಯದಿರು ಶಿವನೆ !
ಅರಿಯಾ ಮಗನೆ! ಮನೆಯ ಮಲ್ಲಯ್ಯ ನಿನಗೆಂದು ಬಂದುದನು.
ನೀವು ಭಕ್ತರಂಗಳದಲ್ಲಿ ಆಡುವ ತೊತ್ತು ವೇಶಿಯ ಮಗನೆಂದು ಬಂದಿರಿ ಶಿವನೆ !
ಎಂದು ಮುಗ್ಧವಾಗಿ ಹಾಡಿದವರು – **ಸಿದ್ಧರಾಮ**

೩೨೯. ಅಕ್ಕ ಕೇಳವ್ವ, ನಾನೊಂದ ಕನಸ ಕಂಡೆ ಎಂದು ಅಕ್ಕಿ ಅಡಕೆ ಓಲೆ ತೆಂಗಿನ ಕಾಯಿಯನ್ನು,
ಚಿಕ್ಕ ಚಿಕ್ಕ ಕೆಂಜೆಡೆಗಳ ಸುಲಿಪಲ್ಲ ಗೊರವನನ್ನು ಕಂಡವರು – **ಅಕ್ಕಮಹಾದೇವಿ**

೩೩೦. ಅಳಿ ಸಂಕುಲವೆ, ಮಾಮರವೇ, ಬೆಳದಿಂಗಳೆ, ಕೋಗಿಲೆಯೇ ಎನ್ನೊಡೆಯನ್ನನ್ನು ಕಂಡಿರಾ
ಎಂದು ಪ್ರಲಾಪಿಸಿದರು – **ಅಕ್ಕಮಹಾದೇವಿ**

೩೩೧. ಆಹಾರವ ಕಿರಿದು ಮಾಡಿರಣ್ಣಾ ಎಂದು ಹೇಳಿ ಬಂದ ಕಾಯವ ಕೆಡಸದೆ ಉಳಿಸಿಕೊಳ್ಳಿರಿ
ಎಂದು ಹಿತವಚನ ನುಡಿದವರು – **ಅಕ್ಕಮಹಾದೇವಿ**

೩೩೨. ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯಾ? ನೀನು ಬಹಿರಂಗವ್ಯವಹಾರದೂರಸ್ಥನು,
ವಾಙ್ಮನಕ್ಕತೀತನು, ನಾದಾತೀತನು, ಮತಿಗತೀತನು, ನೀನು ಸರ್ವಾಂಗ ಪರಿಪೂರ್ಣನು.
ಒಲಿಸಲೆನ್ನಳವಲ್ಲ, ನೀನೊಲಿವುದೇ ಸುಖವಯ್ಯ ಎಂಬ ಅರ್ಪಣಾಶೀಲರು – **ಅಕ್ಕಮಹಾದೇವಿ**

೩೩೩. ಇಂದ್ರನೀಲದ ಗಿರಿಯನೇರಿಕೊಂಡು ಚಂದ್ರಕಾಂತದ ಶಿಲೆಯನಪ್ಪಿಕೊಂಡು . . . . . . .
ಅಂಗಭಂಗ ಮನಭಂಗವಳಿದು ನಿಮ್ಮನೆಂದಿಂಗೊಮ್ಮೆ ನೆರೆವೆನಯ್ಯಾ ಎಂದು ನೆರೆದವರು – **ಅಕ್ಕಮಹಾದೇವಿ**

೩೩೪. ಈಳೆ ನಿಂಬೆ ಮಾವು ಮಾದಲಕೆ ಹುಳಿನೀರನೆರೆದವರ್ಯಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ ಸಿಹಿನೀರನೆರೆದವರಾರಯ್ಯ?
ಕಳವೆ ರಾಜಾನ್ನ ಶಾಲ್ಯನಕ್ಕೆ ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳದುದುಕವನೆರೆದವರಾರಯ್ಯಾ?
ಎಂದು ಪ್ರಶ್ನಿಸಿದವರು – **ಅಕ್ಕಮಹಾದೇವಿ**

೩೩೫. ಎನ್ನ ಮಾಯದ ಮದವ ಮುರಿಯಯ್ಯಾ, ಎನ್ನ ಕಾಯದ ಕತ್ತಲೆಯ ಕಳೆಯಯ್ಯಾ,
ಎನ್ನ ಜೀವದ ಜಂಜಡವ ಮಾಣಿಸಯ್ಯ, ಎನ್ನ ಸುತ್ತಿದ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ
ಎಂದು ಪ್ರಲಾಪಿಸಿದರು – **ಅಕ್ಕಮಹಾದೇವಿ**

೩೩೬. ಒಬ್ಬನ ಮನೆಯಲುಂಡು, ಒಬ್ಬನ ಮನೆಯಲುಟ್ಟು, ಒಬ್ಬನ ಬಾಗಿಲ ಕಾದಡೆ ನಮಗೇನಯ್ಯಾ?
ನೀನಾರಿಗೊಲಿದಡೂ ನಮಗೇನಯ್ಯಾ? ಭಕ್ತಿಯ ಬೇಡಿ ಬಾಯಿ ಬೂತಾಯಿತ್ತು ಎಂದವರು – **ಅಕ್ಕಮಹಾದೇವಿ**

೩೩೭. ಕದಳಿ ಎಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು ವಿಷಯಂಗಳು,
ಕದಳಿ ಎಂಬುದು ಭವಘೋರಾರಣ್ಯ; ಈ ಕದಳಿ ಎಂಬುದ ಗೆದ್ದು
ಕದಳಿಯ ಬನದಲ್ಲಿ ಭವನಹರನ ಕಂಡವರು – **ಅಕ್ಕಮಹಾದೇವಿ**

೩೩೮. ಕಾಯ ಕರ್ರನೆ ಕಂದಿದಡೇನಯ್ಯಾ? ಕಾಯ ಮಿರ್ರನೆ ಮಿಂಚಿದಡೇನಯ್ಯಾ?
ಅಂತರಂಗ ಶುದ್ಧವಾದ ಬಳಿಕ ನೀನೊಲಿದ ಕಾಯವು ಹೇಗಿದ್ದಡೇನಯ್ಯಾ?
ಎಂದು ಬಣ್ಣಕ್ಕೆ ಬೆಲೆಯಿಲ್ಲ ಎಂದು ಸ್ಪಷ್ಟವಾಗಿ ನುಡಿದವರು – **ಅಕ್ಕಮಹಾದೇವಿ**

೩೩೯. ತನು ಕರಗದವರಲ್ಲಿ, ಮನ ಕರಗದವರಲ್ಲಿ, ಹದುಳಿಗರಲ್ಲದವರಲ್ಲಿ,
ಅರಿವು ಕಣ್ದೆರೆಯದವರಲ್ಲಿ, ಭಾವಶುದ್ಧವಿಲ್ಲದವರಲ್ಲಿ, ಪರಿಣಾಮಿಗಳಲ್ಲದವರಲ್ಲಿ,
ತ್ರಿಕರಣಶುದ್ಧವಿಲ್ಲದವರಲ್ಲಿ, ಹೃದಯಕಮಲ ಅರಳದವರಲ್ಲಿ
ಇರಲೊಲ್ಲೆಯ್ಯಾ ನೀನು, ಎಂದು ಹೇಳುತ್ತಾ ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ
ಎಂದು ಮುಗ್ಧತೆಯಿಂದ ಪ್ರಶ್ನಿಸಿದವರು – **ಅಕ್ಕಮಹಾದೇವಿ**

೩೪೦. ನಿನ್ನ ಮಾಯೆಗೆ ನಾನಂಜುವಳಲ್ಲ ಎಂದು ಸವಾಲು ಹಾಕಿದವರು – **ಅಕ್ಕಮಹಾದೇವಿ**

೩೪೧. ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕೆಂದು ಹಿತವಚನ ಹೇಳಿದವರು – **ಅಕ್ಕಮಹಾದೇವಿ**

೩೪೨. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ,
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗೆ,
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೆ, ಸೀಮೆಯಿಲ್ಲದ ನಿಸ್ಸೀಮಂಗೊಲಿದವರು – **ಅಕ್ಕಮಹಾದೇವಿ**

೩೪೩. ಆತ್ಮಸಂಗಾತಕ್ಕೆ ನೀ ಎನಗುಂಟು ಎಂದು ಹಾಡಿದವರು – **ಅಕ್ಕಮಹಾದೇವಿ**

೩೪೪. ನಿಮ್ಮ ಮಂಡೆಗೆ ಹೂವ ತರುವೆನಲ್ಲದೆ ಹುಲ್ಲ ತಾರೆನು ಎಂದು ಉದ್ಘೋಷಿಸಿದವರು – **ಅಕ್ಕಮಹಾದೇವಿ**

೩೪೫. ಹೊಳೆವ ಕೆಂಜೆಡೆಗಳ, ಮಣಿ ಮಕುಟದ, ಒಪ್ಪುವ ಸುಲಿಪಲ್ಗಳ, ನಗೆಮೊಗದ,
ಕಂಗಳ ಕಾಂತಿಯ, ಈರೇಳುಭುವನವ ಬೆಳಗುವ ದಿವ್ಯಸ್ವರೂಪವನ್ನು ಕಂಡವರು – **ಅಕ್ಕಮಹಾದೇವಿ**

೩೪೬. ಎಲ್ಲರೂ ಓದುವುದು ವಚನಂಗಳು; ಎಲ್ಲರೂ ನುಡಿವರು ವಚನಂಗಳು;
ಹೇಳುವಾತ ಗುರುವಲ್ಲ, ಕೇಳುವಾತ ಶಿಷ್ಯನಲ್ಲ, ಹೇಳಿಹೆ ಕೇಳಿಹೆನೆಂಬನ್ನಕ್ಕರ
ವಿರಕ್ತಿಸ್ಥಲಕ್ಕೆ ಭಂಗ ನೋಡಾ ಎಂದು ಅಮುಗೇಶ್ವರನಲ್ಲಿ ನುಡಿದವಳು – **ಅಮುಗೆ ರಾಯಮ್ಮ**

೩೪೭. ಕಾವಿ ಕಾಷಾಂಬರವ ಹೊದ್ದು ಕಾಮವಿಕಾರಕ್ಕೆ ತಿರುಗುವ
ಕರ್ಮಿಗಳ ಮುಖವ ನೋಡಲಾಗದು,
ಜಂಗಮವಾಗಿ ಜಗದಿಚ್ಛೆಯ ನುಡಿವ ಜಂಗುಳಿಗಳಮುಖವ ನೋಡಲಾಗದು,
ಲಿಂಗೈಕ್ಯರೆನ್ನಿಸಿಕೊಂಡು ಅಂಗವಿಕಾರಕ್ಕೆ ತಿರುಗುವ ಲಿಂಗದ್ರೋಹಿಗಳ ಮುಖವ ನೋಡಲಾಗದು
ಎಂದು ಕಟುವಾಗಿ ನುಡಿದ ವಚನಕಾರ್ತಿ – **ಅಮುಗೆ ರಾಯಮ್ಮ**

೩೪೮. ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ? . . .
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ ಎಂದು ತಿಳಿಹೇಳಿದವರು – **ಆಯ್ದಕ್ಕಿ ಲಕ್ಕಮ್ಮ**

೩೪೯. ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ,
ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು
ನಿಶ್ಚೈಸಿ ಮಾಡಬೇಕು ಎಂದು ನುಡಿದವರು – **ಆಯ್ದಕ್ಕಿ ಲಕ್ಕಮ್ಮ**

೩೫೦. ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು; ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ;
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಲ್ಲದ ಶೃಂಗಾರ;
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಎಂದು ವಿಶ್ಲೇಷಿಸಿದವರು – **ಆಯ್ದಕ್ಕಿ ಲಕ್ಕಮ್ಮ**

೩೫೧. ವ್ರತವೆಂಬುದು ನಾಯಕರತ್ನ; ವ್ರತವೆಂಬುದು ಸುಪ್ಪಾಣಿಯ ಮುತ್ತು;
ವ್ರತವೆಂಬುದು ಜೀವನ ಕಳೆ; ವ್ರತವೆಂಬುದು ಸುಯಿಧಾನ. ವ್ರತ ತಪ್ಪಲು,
ಉರಿಲಿಂಗಪೆದ್ದಿಗಳರಸನೊಲ್ಲನವ್ವಾ ಎಂದು ನುಡಿದವರು – **ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ**

೩೫೨. ಕಾಗೆಯ ನಾಯ ತಿಂದವರಿಲ್ಲ; ವ್ರತಭ್ರಷ್ಟನ ಕೂಡಿದವರಿಲ್ಲ?
ನಾಯಿಗೆ ನಾರಂಗವಕ್ಕುವುದೇ? ಲೋಕದ ನರಂಗೆ ವ್ರತವಕ್ಕುವುದೇ
ಶಿವಬೀಜಕಲ್ಲದೆ ನೀವೆ ಸಾಕ್ಷಿ, ನಿಜಗುಣೇಶ್ವರಲಿಂಗದಲ್ಲಿ
ಎಂದು ಬಿನ್ನವಿಸಿದವರು – **ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ**

೩೫೩. ಕದಿರು ಮುರಿಯೆ ಏನೂ ಇಲ್ಲ,
ವ್ರತಹೀನನ ನೆರೆಯಲಿಲ್ಲ, ಗುಮ್ಮೇಶ್ವರಾ ಎಂದವರು – **ಕದಿರೆ ಕಾಯಕದ ಕಾಳವ್ವೆ**

೩೫೪. ಎಲ್ಲರ ಗಂಡಂದಿರು ಪರದಳವಿಭಾಡರು; ಎನ್ನ ಗಂಡ ಮನದಳವಿಭಾಡ;
ಎಲ್ಲರ ಗಂಡಂದಿರು ಗಜವೇಂಟೆಕಾರರು; ಎನ್ನ ಗಂಡ ಮನವೇಂಟೆಕಾರ
ಎಂದು ವಿಶ್ಲೇಷಿಸಿದ ವಚನಕಾರ್ತಿ **– ಕದಿರೆ ರೆಮ್ಮವ್ವೆ**

೩೫೫. ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ; ವ್ರತಭ್ರಷ್ಟರ ನಿಟ್ಟೊರಸುವೆ;
ಸುಟ್ಟು ತುರತುರನೆ ತೂರುವೆ,
ನಿರ್ಭೀತ ನಿಜಲಿಂಗದಲ್ಲಿ ಎಂದು ದಿಟ್ಟತೆಯಿಂದ ನುಡಿದ ವಚನಕಾರ್ತಿ **– ಕಾಲಕಣ್ಣಿಯ ಕಾಮಮ್ಮ**

೩೫೬. ಆಯುಷ್ಯತೀರಲು ಮರಣ; ವ್ರತ ತಪ್ಪಲು ಶರೀರ ಕಡೆ.
ಮೇಲುವ್ರತವೆಂಬ ತೂತರ ಮೆಚ್ಚ ನಮ್ಮ ಅಗಜೇಶ್ವರಲಿಂಗ
ಎಂದು ನುಡಿದ ವಚನಕಾರ್ತಿ **– ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ**

೩೫೭. ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ. ವ್ರತಹೀನನ ನೆರೆಯೆ
ನರಕವಲ್ಲದೆ ಮುಕ್ತಿಯಿಲ್ಲ. ಅರಿಯದುದು ಹೋಗಲಿ, ಅರಿದು ಬೆರೆದನಾದಡೆ,
ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ, ಒಲ್ಲೆ ಬಲ್ಲೆನಾಗಿ,
ನಿಮ್ಮಾಣೆ ನಿರ್ಲಜ್ಜೇಶ್ವರಾ ಎಂದು ನುಡಿದವಳು **– ಕೊಟ್ಟಣದ ಸೊಮಮ್ಮ**

೩೫೮. ಅವಳ ಕಂದ ಬಾಲಸಂಗ, ನಿನ್ನ ಕಂದ ಚೆನ್ನಲಿಂಗ
ಎಂದು ಹೇಳಿದರಮ್ಮಾ ಎನ್ನ ಒಡೆಯರು.
ಫಲವಿಲ್ಲದ ಕಂದನಿರ್ಪನವಳಿಗೆ, ಎನಗೆ ಫಲವಿಲ್ಲ, ಕಂದನಿಲ್ಲ.
ಇದೇನೋ ದುಃಖದಂದುಗ ಎಂದು ವ್ಯಥಿತರಾದವರು **– ಗಂಗಾಂಬಿಕೆ**

೩೫೯. ಎನ್ನನರಿಸದೆ ನಿನ್ನನರಿಯಿಸಿದಡೆ, ನೀನೆನಗೆ ಗುರುವಲ್ಲ; ನಾ ನಿನಗೆ ಶಿಷ್ಯನಲ್ಲ.
ಎನ್ನನರಿಯಿಸಿದೆ ನೀನೆನಗೆ ಗುರು; ನಾ ನಿನಗೆ ಶಿಷ್ಯ ಮಸಣಯ್ಯಪ್ರಿಯ
ಎಂದು ನುಡಿದ ವಚನಕಾರ್ತಿ **– ಗಜೇಶಮಸಣಯ್ಯಗಳ ಪುಣ್ಯಸ್ತ್ರೀ**

೩೬೦. ಭಕ್ತರು ಜಂಗಮದಲ್ಲಿ ಕಟ್ಟಿ ಹೋರಲೇಕೆ? ಧೂಪದ ಹೊಗೆ ಎತ್ತ ಹೋದಡೂ ಸರಿ.
ಇದು ಸತ್ಯವೆಂದೆ ಎಂದು ನಾಸ್ತಿನಾಥನನ್ನು ಕರೆದವರು **– ಗೊಗ್ಗವ್ವೆ**

೩೬೧. ಪರಿಪೂರ್ಣನಲ್ಲ, ಪ್ರದೇಶಿಕನಲ್ಲ, ಶರಣನಲ್ಲ, ಐಕ್ಯನಲ್ಲ, ಪರಮನಲ್ಲ, ಜೀವನಲ್ಲ,
ನಿರವಯನಲ್ಲ, ಸಾವಯನಲ್ಲ; ಪರವಿಹವೆಂಬುಭಯದೊಳಿಲ್ಲದವನು.
ನಿರಾಲಯ ನಿಜಗುರು ಶಾಂತೇಶ್ವರನ ಶರಣನ ನಿಲವು
ಉಪಮೆಗೆ ತಾನುಪಮ ಎಂದು ವಿಶ್ಲೇಷಿಸಿದವಳು **– ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ**

೩೬೨. ಕುಲಸೂತಕವ, ಛಲಸೂತಕವ, ತನುಸೂತಕವ, ಮನಸೂತಕವ, ನೆನಹುಸೂತಕವ,
ಭಾವಸೂತಕವ ಕಳೆದಾತ ಬಸವಣ್ಣ ಎಂದು ಹೇಳುತ್ತಾ
ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯಕಮಲದಲ್ಲಿ ನಿಜನಿವಾಸಿಯಾಗಿರಿಸಿದ
ಎನ್ನ ತಂದೆ ಸಂಗನಬಸವಣ್ಣನು ಎಂದು ಭಾವಪೂರಿತಳಾದ ವಚನಕಾರ್ತಿ **– ನಾಗಲಾಂಬಿಕೆ**

೩೬೩. ಮಡದಿ ಎನ್ನಲಾಗದು ಬಸವಂಗೆ ಎನ್ನನು. ಪುರುಷನೆನಲಾಗದು ಬಸವನ ಎನಗೆ.
ಉಭಯದ ಕುಳವ ಹರಿದು ಬಸವಂಗೆ ಶಿಶುವಾನಾದೆನು, ಬಸವನೆನ್ನ ಶಿಶುವಾದನು
ಎಂದ ವಚನಕಾರ್ತಿ **– ನೀಲಾಂಬಿಕೆ**

೩೬೪. ತನು ಬತ್ತಲೆಯಾದಡೇನು, ಮನ ಬತ್ತಲೆಯಾಗದನ್ನಕ್ಕ?
ವ್ರತವಿದ್ದಡೇನು, ವ್ರತಹೀನರಾದ ಬಳಿಕ? ನೆರೆದಡೆ ನರಕವಯ್ಯಾ ನಿಂಬೇಶ್ವರಾ
ಎಂದು ಹೇಳಿದ ವಚನಕಾರ್ತಿ **– ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ**

೩೬೫. ಕೈತಪ್ಪಿ ಕೆತ್ತಲು ಕಾಲಿಗೆ ಮೂಲ, ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ,
ವ್ರತಹೀನನ ನೆರೆಯಲು ನರಕಕ್ಕೆ ಮೂಲ, ಕರ್ಮಹರ ಕಾಳೇಶ್ವರಾ ಎಂದು
ಮೂಲವನ್ನು ಹುಡುಕಿದವರು **– ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ**

೩೬೬. ಅರಿವೆ ಬಿಡಾಡಿ, ಅರಿಯದೆ ಬಿಡಾಡಿ, ಮರವೆ ಬಿಡಾಡಿ, ಮರೆಯದೆ ಬಿಡಾಡಿ,
ಅರಿವರತು ಕುರುಹಿಲ್ಲದಾತ ನೀನೆ ಬಿಡಾಡಿ ಎಂದು ಬೀಡಾಡಿದವರು **– ಬೊಂತಾದೇವಿ**

೩೬೭. ಸತ್ಯವುಳ್ಳಲ್ಲಿ ಶಬುದ ಹಿಂಗದು; ಭಾವವುಳ್ಳಲ್ಲಿ ಭಕ್ತಿ ಹಿಂಗದು.
ಮೂರುಲೋಕದ ಹಂಗಿನ ಶಬುದವೇನಯ್ಯಾ? ಎನ್ನ ಯುಕುತಿಯ ಮುಕುತಿಯ
ಬಕುತಿಯ ಪದವನ್ನು ಕಂಡು ನಾಚಿದನಜಗಣ್ಣ ತಂದೆ ಎಂದು ಹಾಡಿದವರು **– ಮುಕ್ತಾಯಕ್ಕ**

೩೬೮. ಆರುದೇವರ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ.
ಮೂರುದೇವರ ನಿಮ್ಮ ಮೂಗಿನಲ್ಲಿ ಮುರಿದುಕೊಳ್ಳಿ.
ಗುರು ತೋರಿದ್ದು ಒಂದೇ ದೇವರು ಸಾಕು, ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ
ಎಂದು ಸ್ಪಷ್ಟವಾಗಿ ಹೇಳಿದವರು **– ಮೋಳಿಗೆ ಮಹಾದೇವಿ**

೩೬೯. ಅರ್ಚನೆ ಪೂಜನೆ ನೇಮವಲ್ಲ; ಮಂತ್ರತಂತ್ರ ನೇಮವಲ್ಲ;
ಧೂಪ ದೀಪಾರತಿ ನೇಮವಲ್ಲ; ಪರಧನ ಪರಸ್ತ್ರೀ
ಪರದೈವಂಗಳಿಗೆರಗದಿಪ್ಪುದೇ ನೇಮ. ಶಂಭುಜಕ್ಕೇಶ್ವರನಲ್ಲಿ
ಇವು ಕಾಣಿರಣ್ಣಾ ನಿತ್ಯನೇಮ ಎಂದು ತಿಳಿಹೇಳಿದವರು **– ಸತ್ಯಕ್ಕ**

೩೭೦. ತನ್ನ ತಾನರಿಯದೆ ಅನ್ಯರಿಗೆ ಬೋಧೆಯ ಹೇಳುವ ಅಣ್ಣಗಳಿರಾ, ನೀವು ಕೇಳಿರೋ.
ಅವರ ಬಾಳುವೆ ಎಂತೆಂದಡೆ : ಕುರುಡ ಕನ್ನಡಿಯ ಹಿಡಿದಂತೆ ಎಂದು ಹೇಳುತ್ತಾ;
ಮಹಾಬೆಳಗಿನಲ್ಲಿ ಓಲಾಡುವ ಶರಣರ ವಾಗ್ಜಾಲವ ಕಲಿತುಕೊಂಡು
ನುಡಿವ ಕಾಕುಮನುಜರೆತ್ತ ಬಲ್ಲರು ನಿಮ್ಮ ನೆಲೆಯ
ಅಪ್ಪಣಪ್ರಿಯ ಚೆನ್ನಬಸವಣ್ಣ ಎಂದು ನುಡಿದವರು **– ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ**

೩೭೧. ಬಡತನಕೆ ಉಂಬುವ ಚಿಂತೆ ಎಂದು ಚಿಂತೆಗಳ ಸಾಲನ್ನು ಪಟ್ಟಿ ಮಾಡುತ್ತಾ
ಶಿವಚಿಂತೆಯಲ್ಲಿದ್ದವರೊಬ್ಬರನ್ನು ಕಾಣೆ ಎಂದ ವಚನಕಾರ **– ಅಂಬಿಗರ ಚೌಡಯ್ಯ**

೩೭೨. ಕಟ್ಟಿದಾ ಲಿಂಗವ ಬಿಟ್ಟು ಬೆಟ್ಟದಾಲಿಂಗಕ್ಕೆ ಹೋಗಿ ಹೊಟ್ಟಡಿಯಾಗಿ ಬೀಳುವ
ಲೊಟ್ಟೆ ಮೂಳನ ಕಂಡರೆ ಮೆಟ್ಟಿದ ಎಡದ ಪಾದರಕ್ಷೆಯ ತಕ್ಕೊಂಡು
ಲಟಲಟನೆ ಹೊಡೆ ಎಂದಾತ – **ಅಂಬಿಗರ ಚೌಡಯ್ಯ**

೩೭೩. ಕಂತೆ ತೊಟ್ಟವ ಗುರುವಲ್ಲ, ಕಾವಿ ತೊಟ್ಟವ ಜಂಗಮನಲ್ಲ, ಶೀಲ ಕಟ್ಟಿದವ ಭಕ್ತನಲ್ಲ,
ನೀರು ತೀರ್ಥವಲ್ಲ, ಕೂಳು ಪ್ರಸಾದವಲ್ಲ. ಹೌದೆಂಬವನ ಬಾಯ ಮೇಲೆ
ಅರ್ಧಮಣ ಪಾದರಕ್ಷೆಯ ತೆಗೆದುಕೊಂಡು
ಮಾಸಿ ಕಡಿಮೆಯಿಲ್ಲದೆ ತೂಗಿ ತೂಗಿ ಟೊಕಟೊಕನೆ ಹೊಡೆ ಎಚಿದಾತ – **ಅಂಬಿಗರ ಚೌಡಯ್ಯ**

೩೭೪. ಕಾಯದಿಂದ ಕರ್ಮವ ಕಂಡು, ಭಾವದಿಂದ ಲಿಂಗವ ಕಂಡು,
ಲಿಂಗದಿಂದ ಸ್ವಾನುಭಾವವಾಗಿ ಅಂಗದ ಸಂಗಕ್ಕೆ ಹೊರಗಾಯಿತ್ತು
ಕದಂಬಲಿಂಗವನರಿಯಲಾಗಿ ಎಂದು ಸ್ವಯಂವಿಮರ್ಶಿತನಾದವರು – **ಕಂಬದ ಮಾರಿತಂದೆ**

೩೭೫. ಹಿಡಿಯಿಲ್ಲದ ಶಸ್ತ್ರ, ಕೀಲಿಲ್ಲದ ಕತ್ತರಿ, ಉಭಯ ಒಡಗೂಡದ ಚಿಮ್ಮುಟ,
ರೂಹಿಲ್ಲದ ಚಣ, ಹಲ್ಲಿಲ್ಲದ ಹಣಿಗೆ, ಮಲವಿಲ್ಲದ ಬೆಳಗಿನ ಮುಕುರವ ಹಿಡಿದು
ಶರಣರೆಲ್ಲರ ಅಡಿವಿಡಿದಾಡ ಬಂದೆ. ಚೆನ್ನಬಸವಣ್ಣಂಗೆ ಭೃತ್ಯನಾಗಿ,
ಶರಣತತಿಗೆ ಲೆಂಕನಾಗಿ ಎಂದು ಬಿನ್ನವಿಸುತ್ತಾ ಡಿಂಗರಿಗರ ಕಂದನೆಂದು ಪ್ರತಿಪಾಲಿಸಿಕೋ
ಚೆನ್ನಬಸವಣ್ಣಪ್ರಿಯ ಕಮಳೇಶ್ವರ ಲಿಂಗ ಎಂದು ಪ್ರಾರ್ಥಿಸಿದವನು – **ಕನ್ನಡಿ ಕಾಯಕದ ಅಮ್ಮಿದೇವಯ್ಯ**

೩೭೬. ನುಡಿದ ಮಾತಿಂಗೆ ಕೊರತೆಯೆಂದು, ಮನ ಮಾಡಿ ತನು ಅಂಡಿಸಲೇತಕ್ಕೆ?
ಹಾವಿ ಹೇಳಿಗೆಯ ತೆಗೆದ ಕೋಡಗನಂತೆ ಮಾತಾಡಲೇಕೆ? ಮತ್ತಡಗಲೇಕೆ?
ಮಕರಧ್ವಜವೈರಿ ಮಾರೇಶ್ವರ ಎಂದ ವಚನಕಾರ – **ನಗೆಯ ಮಾರಿತಂದೆ**

೩೭೭. ದೃಷ್ಟಿ ಕಾಮ್ಯಾರ್ಥದಲ್ಲಿ ನೆಟ್ಟು ನೋಡಿ,
ಒಡೆಯರು ಭಕ್ತರ ವಧುಗಳಲ್ಲಿ ಮತ್ತಾ ದೃಷ್ಟಿಯ ಮುಟ್ಟಲೇತಕ್ಕೆ?
ಎಂದು ಪ್ರಶ್ನಿಸಿ ಬಾಹ್ಯದೃಷ್ಟಿಗಳ್ಗರ, ಆತ್ಮಚಿತ್ತಗಳ್ಗರ ವ್ರತಸ್ಥರೆಂದು ಎನಲಾಗದು.
ಮನಕ್ಕೆ ಮನೋಹರ ಶಂಕೇಶ್ವರ ಲಿಂಗವು ಅವರುವ ಮುಟ್ಟದಿಹನಾಗಿ
ಎಂದು ದಿಟ್ಟತೆಯಿಂದ ನುಡಿದ ವಚನಕಾರ – **ಕರುಳ ಕೇತಯ್ಯ**

೩೭೮. ಕಲ್ಲಿಲಿಟ್ಟವಂಗೊಲಿದೆ, ಕಾಲಲೊದ್ದವಂಗೊಲಿದೆ, ಬಾಯಲ್ಲಿ ಉಗಿದವಂಗೊಲಿದೆ.
ಅದು ನಿನ್ನ ಭಕ್ತಿಯೋ, ಸತ್ಯವೋ ಗರ್ವವೋ!
ತ್ರೈಭುವನಂಗಳಿಗಭೇದ್ಯ ತಿಳಿವಡೆ ನಿನ್ನ ಮಹಿಮೆ ಎಂದು
ಉಮೆಯ ವರ ತ್ರಿಪುರಾಂತಕಲಿಂಗನನ್ನು ಕೇಳಿದವನು – **ಕಿನ್ನರಿ ಬ್ರಹ್ಮಯ್ಯ**

೩೭೯. ಅರಳಿದ ಪುಷ್ಪ, ಪರಿಮಳಿಸದಿಹುದೆ? ತುಂಬಿದ ಸಾಗರ, ತೆರೆನೊರೆಗಳಾಡದಿಹುದೆ?
ಆಕಾಶವ ಮುಟ್ಟುವವ ಅಟ್ಟಗೋಲ ಹಿಡಿವನೆ? ಎಂದು ಪ್ರಶ್ನಿಸುತ್ತಾ
ಪರದಲ್ಲಿ ಪರಿಣಾಮಿಯಾದ ಶರಣ ಕರ್ಮ ಪೂಜೆ ಫಲವನತಿಗಳೆಯದಿಹನೆ
ಮಹಾಲಿಂಗ ಗಜೇಶ್ವರ ಎಂದು ಸಾರಿದವನು – ಗಜೇಶ ಮಸಣಯ್ಯ

೩೮೦. ಮದಕರಿ ಮದವೇರಿ ಬೀದಿಯಲ್ಲಿ ಬರಲಾಗಿ
ಎಂಟು ಕೇರಿಯ ಕಂಬ ಮುರಿದು ಒಂಬತ್ತು ಬಾಗಿಲ ಕದವ ಕಿತ್ತು ಮತ್ತೆ ಎನ್ನ
ಮೇಲೊತ್ತಿ ಬರಲಾಗಿ ನಿಶ್ಚಯವಾಗಿ ನಿಂದೆ. ಮತ್ತಗಜದ ಸೊಂಡಿಲು ಮುರಿದೊತ್ತಿ ಇಟ್ಟೆ
ಆ ಗಜವ ಗೊಹೇಶ್ವರನ ಶರಣ ಅಲ್ಲಮನೊತ್ತಿಗಾಗಿ ಎಂದು ಹೇಳಿಕೊಂಡವನು – ಗಾಣದ ಕನ್ನಪ್ಪ

೩೮೧. ಆಯತವಿಲ್ಲದ ಮಠದಲ್ಲಿ ಅಗ್ನಿಯಿಲ್ಲದೆ ಬೋನವ ಮಾಡಿ
ಭಾವವಿಲ್ಲದೆ ಶಿವಕಾರ್ಯಂಗಳು ಭೋಜನವಿಲ್ಲದೆ ಆರಿಸಿ ಕೊಟ್ಟಡೆ
ಆಪ್ಯಾಯನವಾರಿಗೂ ಅಡಸದಿರ್ದುದ ಕಂಡು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದ ವಚನಕಾರ – ಘಟ್ಟಿವಾಳಯ್ಯ

೩೮೨. ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ ಸುಳಿದು ಬೀಸುವ ವಾಯು ನಿಮ್ಮ ದಾನ,
ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ
ಎಂದು ಪ್ರಶ್ನಿಸಿದ ವಚನಕಾರ –ಜೇಡರ ದಾಸಿಮಯ್ಯ

೩೮೩. ಕರಿಯನಿತ್ತಡ ಒಲ್ಲೆ, ಸಿರಿಯನಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ,
ನಿಮ್ಮ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ ನಿನ್ನನಿತ್ತೆ
ಎಂದು ನಿವೇದಿಸಿದ ವಚನಕಾರ – ಜೇಡರ ದಾಸಿಮಯ್ಯ

೩೮೪. ಮೊಲೆ ಮುಡಿ ಬಂದಡೆ ಹೆಣ್ಣೆಂಬರು, ಗಡ್ಡ ಮೀಸೆ ಬಂದಡೆ ಗಂಡೆಂಬರು.
ನಡುವೆ ಸುಳಿವ ಆತ್ಮನು ಹೆಣ್ಣು ಅಲ್ಲ ಗಂಡೂ ಅಲ್ಲ
ಎಂದು ಸ್ಪಷ್ಟಪಡಿಸಿದ ವಚನಕಾರ –ಜೇಡರ ದಾಸಿಮಯ್ಯ

೩೮೫. ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ, ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆಸಿದಂತೆ ಎಂದು ಹೇಳಿದವರು –ಜೇಡರ ದಾಸಿಮಯ್ಯ

೩೮೬. ಕವಿಯ ಹುಗತೆ, ಗಮಕಿಯ ಸಂಚ, ವಾದಿಯ ಚೊಕ್ಕೆಹ, ವಾಗ್ಮಿಯ ಚೇತನ,
ಇಂತೀ ಚತುಷ್ಟಯದಲ್ಲಿ ಯುಕ್ತಿವಂತನಾದಡೇನು?
ಭಕ್ತಿಯನರಿಯಬೇಕು, ಸತ್ಯದಲ್ಲಿ ನಡೆಯಬೇಕು, ವಿರಕ್ತಿಯಲ್ಲಿ ವಿಚಾರಿಸಿ ನಿಲ್ಲಬೇಕು.
ಈ ಗುಣ ಕಾಲಾಂತಕ ಭೀಮೇಶ್ವರಲಿಂಗವನರಿವವನ
ಸದ್ಭಕ್ತಿ ಯುಕ್ತಿ ಎಂದು ತಿಳಿಹೇಳಿದವನು – ಡಕ್ಕೆಯ ಬೊಮ್ಮಣ್ಣ

೩೮೭. ಎನ್ನ ಕಷ್ಟಕುಲದ ಸೂತಕ ನಿಮ್ಮ ಹಸ್ತ ಮುಟ್ಟಿದಲ್ಲಿ ಹೋಯಿತ್ತು!
ಶುಕ್ಲ ಶೋಣಿತದಿಂದಲಾದ ಸೂತಕ ನಿಮ್ಮ ಮುಟ್ಟಲೊಡನೆ ಬಯಲಾಯಿತ್ತು !
ಎಂದು ಹೇಳುತ್ತಾ. . ಅಭಿನವ ಮಲ್ಲಿಕಾರ್ಜುನ ನಿಮ್ಮ ಮುಟ್ಟಿದ ಕಾರಣ
ನಾನು ಬಯಲಾದೆ ಎಂದು ಹೇಳಿಕೊಂಡ ಹಿರಿಯ ಮಾಹೇಶ್ವರರು **–ಡೋಹರ ಕಕ್ಕಯ್ಯ**

೩೮೮. ಶ್ವೇತ ಪೀತ ಕಪೋತ ಕೃಷ್ಣ ಗೌರ ಮಾಂಜಿಷ್ಟ ಕಪಿಲಿ ಕರ್ಬುರ ಅಳಗು ಬೊಟ್ಟಳಗ
ಇಂತೀ ದಶವರ್ಣದ ಪಶುನಾಮದ ಅಸುವನರಿತು ಸಂಜ್ಞೆ ಗರ್ಜನೆ
ತಾಡನೆ ತ್ರಿವಿಧ ಬೇಧಂಗಳಿಂದ ಕಾದೊಪ್ಪಿಸಬೇಕು
ಗೋಪತಿನಾಥ ವಿಶ್ವೇಶ್ವರ ಲಿಂಗಕ್ಕೆ ಎಂದು ಹೇಳಿಕೊಂಡವನು **–ತುರುಗಾಹಿ ರಾಮಣ್ಣ**

೩೮೯. ಅಗ್ನಿಯ ಕಳೆ ಐದು ಗುಣ, ಜ್ಯೋತಿಯ ಕಳೆ ಹಲವು ಗುಣ, ರತ್ನದ ಕಳೆ ನವಗುಣ,
ಚಿತ್ತದ ಕಳೆ ವಿಶ್ವತೋಮುಖ, ಸುಚಿತ್ತದ ಕಳೆ ಏಕಜ್ಯೋತಿಯಾಗಿಪ್ಪುದ ತಿಳಿದು
ಇಷ್ಟದ ಲಕ್ಷ್ಯದಲ್ಲಿ ಬೈಚಿಟ್ಟಾತ ಪ್ರತ್ಯಕ್ಷ ಪರಮಸುಖಿ. ಮರ್ತ್ಯ ಕೈಲಾಸವೆಂಬ ಗುಟ್ಟಿನ ಕೊಳಕಿಲ್ಲ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ
ಅತಿಬಳ ನೋಡಾ, ಮಾತುಳಾಂಗ ಮಧುಕೇಶ್ವರನು ಎಂದ ವಚನಕಾರ **–ದಾಸೋಹದ ಸಂಗಣ್ಣ**

೩೯೦. ಅವರಪ್ಪನ ಮಗಳ ಗಂಡನ ತಂದೆಯ ತಾಯ ತಂದವರ
ಗಂಡನ ಹೆಂಡತಿಯ ಹೆತ್ತವಳ ಮಕ್ಕಳ ಮೂರಿ ತಲೆಗಡಿದವರ
ಅಂದಿನ ನಂಟ ಬಂದ ನಾನು. ನೀಂ ಪಂದಿಯೊಳಗಿರ್ದ ಅಂದವ ತೋರಾ
ಆತುರವೈರಿ ಮಾರೇಶ್ವರ ಎಂದು ಕೇಳಿದವರು **–ನಗೆಯ ಮಾರಿತಂದೆ**

೩೯೧. ಗುರುವಾದಡೂ ಕಾಯಕದಿಂದಲೆ ಜೀವನ್ಮುಕ್ತಿ ಎಂದು ಸ್ಪಷ್ಟವಾಗಿ ಹೇಳಿದವರು **–ನುಲಿಯ ಚಂದಯ್ಯ**

೩೯೨. ಭಾವ ಶುದ್ಧವಾಗಿಪ್ಪುದೇ ಗುರುಪೂಜೆ, ಜ್ಞಾನಶುದ್ಧವಾಗಿಪ್ಪುದೇ ಲಿಂಗಪೂಜೆ,
ತ್ರಿಕರಣ ಶುದ್ಧವಾಗಿ ತ್ರಿವಿಧ ಮಲದಲ್ಲಿ ನಿಶ್ಚಯವಾಗಿ ನಿಂದುದೇ ಜಂಗಮಪೂಜೆ
ಎಂದು ಚಂದೇಶ್ವರಲಿಂಗಕ್ಕೆ ಅರ್ಪಿಸಿದವರು **–ನುಲಿಯ ಚಂದಯ್ಯ**

೩೯೩. ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು
ಎಂದು ಹೇಳಿ ನಿನ್ನಾಸೆಯ ವೇಷದ ಪಾಶಕ್ಕೆ ನೀನೇ ಹೋಗು ಎಂದು ನುಡಿದವರು **– ನುಲಿಯ ಚಂದಯ್ಯ**

೩೯೩ಅ. ಹುಟ್ಟುವಾತ ಮದ್ದಲೆಯ ಕಟ್ಟಿದ. ನಡೆವಾತ ತಾಳವನೊತ್ತಿದ. ಬಿಡುವಾತ ಶ್ರುತಿಯನೆತ್ತಿದ.
ತತ್ಥಾತಿತ್ಥಿ ಎಂಬಾಟ ಇತ್ತಲೇ ಉಳಿಯಿತ್ತು ರೇಕಣ್ಣಪ್ರಿಯ ನಾಗಿನಾಥ
ಎಂದು ಬದುಕಿನ ಬಹುರೂಪವನ್ನು ಹಾಡಿದವರು **–ಬಹುರೂಪಿ ಚೌಡಯ್ಯ**

೩೯೪. ಆಸೆಯ ಬಿಟ್ಟಡೆ ಭಕ್ತರೆಂಬೆ. ವೇಷವ ಬಿಟ್ಟಡೆ ಮಾಹೇಶ್ವರರೆಂಬೆ.
ಭವಪಾಶವ ಬಿಟ್ಟಡೆ ಪ್ರಸಾದಿಯೆಂಬೆ. ಭಾವ ಘಟಿಸಿದಡೆ ಪ್ರಾಣಲಿಂಗಿಯೆಂಬೆ.
ಬಯಕೆ ನಿಂದಡೆ ಶರಣನೆಂಬೆ. ಅರಿವು ಶೂನ್ಯವಾದಡೆ ಐಕ್ಯನೆಂಬೆ.
ಈ ಷಡುಸ್ಥಲದ ಮಹಾಸ್ಥಲದಲ್ಲಿ ಒಡಗೂಡಿ ನಿಂದುದು
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗಕ್ಕಲ್ಲದೆ ಇಲ್ಲವೆಂಬೆ
ಎಂದು ಅರ್ಪಣಾಭಾವದಿಂದ ನುಡಿದ ವಚನಕಾರ **– ಬಾಚಿಕಾಯಕದ ಬಸವಣ್ಣ**

೩೯೫. ಕಲ್ಲರೂಪು ಕಬ್ಬ ಮೆಲ್ಲುವಾಗ, ಎತ್ತಿದ ವಿಮಾನದಲ್ಲಿಪ್ಪ ಸದ್ಗುರು ಬರುವಾಗ,
ಹೂಳಿದ ವೃಷಭ ಕಲೆವಾಗ, ಇಂತಿವು ಭಾವದ ಬಲ್ಮೆ, ಸತ್ಯದ ಚಿತ್ತ, ಚಿತ್ತದ ಹೆಚ್ಚುಗೆ.
ಇಂತೀ ಗುಣ ಸಂಗನಬಸವಣ್ಣನ ಉತ್ಸಾಹ.
ಬ್ರಹ್ಮೇಶ್ವರಲಿಂಗವನರಿವುದಕ್ಕೆ ನಿಶ್ಚಯದ ವಿಶ್ವಾಸವನ್ನು ವ್ಯಕ್ತಪಡಿಸಿದವರು – ಬಾಹೂರ ಬೊಮ್ಮಣ್ಣ

೩೯೬. ಕಾಯಕ್ಕೆ ಸೋಂಕು ಸುಖ, ಜಿಹ್ವೆಗೆ ಮಧುರ ಸುಖ. ಧೃಕ್ಕಿಗೆ ಚಿತ್ರಭೇದ ಸುಖ,
ಶೋತ್ರಕ್ಕೆ ನಾದಶಬ್ದ ಸುಖ. ಘ್ರಾಣಕ್ಕೆ ಸುಗಂಧ ಸುಖ. ಇಂತಿವೆಲ್ಲವನರಿದು,
ಕೊಡುವ ಭೇದದಲ್ಲಿ ಕೊಟ್ಟು, ಅರ್ಪಿತ ಅವಧಾನಿಯಾಗಿರಬೇಕೆಂಬರು.
ಬಹುಭೇದವಂ ತಿಳಿದು, ಏಕೇಂದ್ರಿಯ ಸುಚಿತ್ತನಾಗಿ ಇದ್ದವಂಗೆ,
ಕ್ರೀ ಜ್ಞಾನ ಸಮರ್ಪಣ ಏಣಾಂಕಧರ ಸೋಮೇಶ್ವರಲಿಂಗಕ್ಕೆ
ಎಂದು ನುಡಿದು ನಡೆದವರು – ಬಿಬ್ಬಿ ಬಾಚಯ್ಯ

೩೯೭. ಅಂಗದ ಬೊಕ್ಕಸದ ಮಂದಿರಕ್ಕೆ ಚಿದ್ಘನಲಿಂಗವೆಂಬುದೊಂದು ಬೀಗ.
ತ್ರಿಗುಣವೆಂಬ ಮೂರೆಸಳಿನ ಸಿಕ್ಕು.
ಒಂದು ಪೂರ್ವಗತಿ, ಒಂದು ಮಧ್ಯಗತಿ, ಒಂದು ಉತ್ತರಗತಿಯಾಗಿ ಸಿಕ್ಕಿದವು ಮೂರೆಸಳು.
ಆ ಎಸಳಿಗೆ ಘಟ ಒಂದೆ ಒಡಲು. ಎಸಳ ತೆಗವುದಕ್ಕೆ ಕೈಯ ಕಾಣೆ.
ಪ್ರತಿ ಕೈಗೆ ಎಸಳು ಅಸಾಧ್ಯ ನೋಡಾ.
ಇಂತೀ ಬೀಗದ ಗುಣವ ಬಸವಣ್ಣಪ್ರಿಯ ನಾಗರೇಶ್ವರಲಿಂಗಾ ನೀವೇ ಬಲ್ಲಿರಿ
ಎಂದು ನಿವೇದಿಸಿದವರು – ಬೊಕ್ಕಸದ ಚಿಕ್ಕಣ್ಣ

೩೯೮. ಕುದುರೆಯನೇರಿದ ರಾವುತ, ಕುದುರೆ ಕೆಟ್ಟಿತೆಂದು ಅರಸಹೋಗಿ,
ಇರುಬಿಲಿ ಬಿದ್ದಡೆ ಬಳ್ಳು ತರಬಿ,
ಕುದುರೆ ರಾವುತರನಿಬ್ಬರ ನುಂಗಿತ್ತು. ಇದೇನು ಸೋಜಿಗ ಹೇಳಾ,
ನಿಜಗುರು ಭೋಗೇಶ್ವರಾ ಎಂದು ಬೆಡಗಿನ ವಚನವನ್ನು ಹಾಡಿದವರು – ಭೋಗಣ್ಣ

೩೯೯. ಅಕ್ಕರ ಗಣಿತ ಗಾಂಧರ್ವ ಜ್ಯೋತಿಷ ಆತ್ಮವಿದ್ಯೆ ತರ್ಕ ವ್ಯಾಕರಣ ಅಮರಸಿಂಹ
ಛಂದಸ್ಸು ನಿಘಂಟು ಶಾಲಿಹೋತ್ರ ಗ್ರಹವಾದ ಗಾರುಡ ದ್ಯೂತ ವೈದಿಕಶಾಸ್ತ್ರ
ಸಾಮುದ್ರಿಕಶಾಸ್ತ್ರ ಲಕ್ಷಣಶಾಸ್ತ್ರ ಅಶ್ವಶಿಕ್ಷೆ ಗಜಶಿಕ್ಷೆ ಗೋಕರ್ಣ ದಾಡಾಬಂಧ
ಮೂಲಿಕಾಸಿದ್ಧಿ ಭೂಚರತ್ವ ಖೇಚರತ್ವ ಅತೀತ ಅನಾಗತ ವರ್ತಮಾನ ಸ್ಥೂಲ
ಸೂಕ್ಷ್ಮ ಇಂದ್ರಜಾಲ ಮಹೇಂದ್ರಜಾಲ ವಡ್ಯಾನಚೇಷ್ಟೆ ಪರಕಾಯಪ್ರವೇಶ
ದೂರದೃಷ್ಟಿ ದೂರಶ್ರವಣ ಋಗ್ಯಜುಃಸಾಮಾಥರ್ವಣ ಶ್ರುತಿಸ್ಮೃತಿ ಆಯುರ್ದಾಯ
ನಷ್ಟಿಕಾಮುಷ್ಟಿಚಿಂತನೆ ಚೋರವಿದ್ಯೆ ಅಮೃತೋದಯ
ಭಾಷಾಪರೀಕ್ಷೆ ವೀಣಾವಿದ್ಯೆ ಭೃಂಗಿವಿದ್ಯೆ ಮಲ್ಲವಿದ್ಯೆ ಶಸ್ತ್ರವಿದ್ಯೆ ಧನುರ್ವಿದ್ಯೆ
ಅಗ್ನಿಸ್ತಂಭ, ಜಲಸ್ತಂಭ ವಾಯುಸ್ತಂಭ ವಾದವಶ್ಯ ಅಂಜನಾಸಿದ್ಧಿ ಘಟಿಕಾಸಿದ್ದಿ ಮಂತ್ರತಂತ್ರಸಿದ್ಧಿ
ಇವೆಲ್ಲವ ಕಲಿತಡೇನು ಅರುವತ್ನಾಲ್ಕು ವಿದ್ಯಾಪ್ರವೀಣನೆನಿಸಿಕೊಂಬನಲ್ಲದೆ
ಲಿಂಗವಂತನೆನಿಸಿಕೊಂಬುದಿಲ್ಲ ಎಂದು ಹೇಳಿ ಲಿಂಗವುಳ್ಳ ಶಿವಭಕ್ತಂಗೆ
ಇವರೆಲ್ಲರೂ ಕೂಡಿ ಸರಿಬಾರದೆಂದ ನಮ್ಮ ಕಲಿದೇವರದೇವ ಯಾರು – ಮಡಿವಾಳ ಮಾಚಯ್ಯ

೩೯೯. ಉಡಿಯ ಲಿಂಗವ ಬಿಟ್ಟು, ಗುಡಿಯ ಲಿಂಗಕ್ಕೆ ಶರಣೆಂಬ
ಮತಿಭ್ರಷ್ಟರನೇನೆಂಬೆನಯ್ಯಾ ಎಂದು ಕಲಿದೇವರದೇವನನ್ನು ಪ್ರಶ್ನಿಸಿದ ವಚನಕಾರ **– ಮಡಿವಾಳ ಮಾಚಯ್ಯ**

೪೦೧. ಪರಮಮೂರ್ತಿಯಾದಡೆ ಪರಮನ ಸಂಚವನರಿಯಬೇಕು,
ವಿರಕ್ತನಾದಡೆ ಇಹಪರನಾಸ್ತಿ, ಪರಮ ಪರಿಣಾಮಿಯಾಗಿರಬೇಕು.
ಜ್ಞಾನಿಯಾದಡೆ ಸರ್ವಜೀವದ ಚೇತನವನರಿಯಬೇಕು.
ಸಾಕು ಮಾತಿನ ಮಾಲೆಯ ನೀತಿಯ ನುಡಿ.
ಅರ್ಕೇಶ್ವರಲಿಂಗನ ಬೆಚ್ಚಂತೆ ಇರಬೇಕು ಎಂದು ನುಡಿದವರು **– ಮಧುವರಸ**

೪೦೨. ಅರ್ಪಿಸುವುದಕ್ಕೆ ಮುನ್ನವೆ ಮನವರಿದು, ಕಂಗಳು ತುಂಬಿ,
ಕಂಡ ಮತ್ತೆ ಅರ್ಪಿತವೆಲ್ಲಿ ಅಡಗಿತ್ತು?
ಸಂದೇಹವ ಬಿಟ್ಟು ನಿಂದಲ್ಲಿ, ಮನಸಂದಿತ್ತು ಮಾರೇಶ್ವರಾ
ಎಂದು ಅರ್ಪಿತಗೊಂಡವರು **– ಮನಸಂದ ಮಾರಿತಂದೆ**

೪೦೩. ಕಾಲೆರಡರಲ್ಲಿ ನಿನ್ನಾಟವೇ? ಕೈಯೆಡರಲ್ಲಿ ನಿನ್ನ ಬಂಧವೇ?
ಮೈಯೊಂದರಲ್ಲಿ ನಿನ್ನ ಭೋಗವೆ?
ಬಾಯೊಂದರಲ್ಲಿ ನಿನ್ನ ತೃಪ್ತಿಯೆ? ಆಯಿದರ ಗುಹೆಯೊಳಗೆ ಗುಹೇಶ್ವರನಾದೆ.
ಮೂರರ ಗೂಡಿನೊಳಗೆ ಗುಮ್ಮಟನಾದೆ.
ಆರರ ಅಂಗವ ಹರಿದು, ಅಗಮ್ಯೇಶ್ವರಲಿಂಗವಬಾದೆ. ಮೀರಿ ಕಾಬುದೇನು ಹೇಳಿರಣ್ಣಾ?
ಎಂದು ಪ್ರಶ್ನಿಸಿದ ವಚನಕಾರ **– ಮನುಮುನಿ ಗುಮ್ಮಟದೇವ**

೪೦೪. ಆಲಿ ಆಲಯದಲ್ಲಿ ಕರಿಗೊಳಲು, ಆಲಿಸುವ ಶ್ರವಣವು ಮೇಲಿಪ್ಪ ಆಕಾಶವನಡರಲು,
ಉಲುಹು ನಿರ್ಭೂತಚಿತ್ತ ಸಮಾಧಾನವನೆಯ್ದಲು, ಕಾಲಕರ್ಮಭವಂಗಳ ಗೆಲುವುದಿದೇನು
ಸೋಜಿಗವು ಹೇಳಾ, ರೇವಣ್ಣಪ್ರಭುವೇ ಎಂದವರು **– ಮರುಳಸಿದ್ದೇಶ್ವರ**

೪೦೫. ಮನ ಬುದ್ದಿ ಚಿತ್ತ ಅಹಂಕಾರವೆಂಬ ನಾಲ್ಕು ಲೋಹದಿಂದ ಸರ್ವೇಂದ್ರಿಯದ ಮೊತ್ತ.
ಮನ ವಸ್ತುವ ಮುಟ್ಟದೆ, ನಿಜ ನಿಷ್ಠೆಯನರಿಯದೆ,
ಬಹುಮೊತ್ತದ ಮಾತಲ್ಲದ ಮಾತನಾಡುವದು,ಕಳ್ಳವಣ, ಸಲ್ಲದ ತಾರ ಇವೆಲ್ಲವ ತಿಳಿದು
ಕಂಬಳಿಯ ಚೀಲದವನ ಬೆಂಬಳಿಯಲ್ಲಿ ಬನ್ನಿ.
ನಿಮಗಲ್ಲದ ಒಡವೆಯನೊಳ್ಳಿತ್ತು ಮಾಡಿಕೊಡುವೆ,
ಊರ್ಧ್ವರೇತೋಮೂರ್ತಿ ಶ್ವೇತ ಸ್ವಯಂಭು ಕಪಿಲೇಶ್ವರಲಿಂಗ ಸಾಕ್ಷಿಯಾಗಿ
ಎಂದು ನುಡಿದವರು **– ಮಲಹರ ಕಾಯಕದ ಚಿಕ್ಕದೇವಯ್ಯ**

೪೦೬. ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ,
ಕಶ್ಯಪ ಕಮ್ಮಾರ, ರೋಮಜ ಕಂಚುಗಾರ, ಕೌಂಡಿಲ್ಯ ನಾವಿದನೆಂಬುದನರಿದು,
ಮತ್ತೆ ಕುಲವುಂಟೆದು ಛಲಕ್ಕೆ ಹೋರಲೇತಕ್ಕೆ? ಇಂತೀ ಸಪ್ತ್ಯಋಷಿಯರುಗಳೆಲ್ಲರೂ
ಸತ್ಯದಿಂದ ಮುಕ್ತರಾದುದನರಿಯದೆ ಅಸತ್ಯದಲ್ಲಿ ನಡೆದು, ವಿಪ್ರರು ನಾವು ಘನವೆಂದು ಹೋರುವ
ಹೊತ್ತುಹೋಕರ ಮಾತೇತಕ್ಕೆ? ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿನಿಜಾತ್ಮರಾಮ ರಾಮನಾ ಎಂದು ಸ್ಪಷ್ಟವಾಗಿ ಹೇಳಿದವರು **– ಮಾದಾರ ಚೆನ್ನಯ್ಯ**

೪೦೭. ಪೂಜೆ ಪುಣ್ಯಕ್ಕೆ ಒಡಲು, ಜ್ಞಾನ ಶೂನ್ಯಕ್ಕೆ ಒಡಲು,
ಉಂಟು ಇಲ್ಲ ಎಂಬುದು ಸಂದೇಹಕ್ಕೆ ಒಡಲು.
ಇಂತೀ ಒಡಲಳಿದು, ಕೊಡುವ ಕೊಂಬ ಎಡೆಯಾಟ ನಿಂದು,
ಜಿಡ್ಡೆಂಬ ಜಿಗುಡು ಹರಿದು, ಶೂನ್ಯವೆಂಬ ಸುಳುಹು ಸತ್ತು,
ಮತ್ತಾವುದೂ ಕಲೆದೋರದೆ ನಿಂದ ನಿಜ, ತಾನು ತಾನೆ,
ಕಾಮಧೂಮ ಧೂಳೇಶ್ವರ ಎಂದವರು — ಮಾದಾರ ಧೂಳಯ್ಯ

೪೦೮. ಅಸಿಯಾಗಲಿ ಕೃಷಿಯಾಗಲಿ, ವಾಚಕ ವಾಣಿಜ್ಯ ಮಸಿಯಾಗಲಿ,
ಮಾಡುವಲ್ಲಿ ಹುಸಿಯಿಲ್ಲದಿರಬೇಕು.
ಅದು ಅಸಮಾಕ್ಷನ ಬರವು, ಪಶುಪತಿಯ ಇರವು,
ಐಘಟದೂರ ರಾಮೇಶ್ವರಲಿಂಗ ತಾನೆ ಎಂದು
ಮಾಡುವ ಕಾಯಕ ಸತ್ಯ ಶುದ್ಧವಾಗಿರಬೇಕು ಎಂದು ಹೇಳಿದವನು — ಮೆರೆಮಿಂಡಯ್ಯ

೪೦೯. ಒಂದು ಬಿದಿರಿಂಗೆ ಕವೆ ಮೂರು, ಆ ಕವೆಯ ಒಳಗೆ ಲಕ್ಕ ಸಿಬಿರು,
ಮೂರು ಕವೆಯ ಕೊಚ್ಚಿಸಿ, ಬಿಲ್ಲ ಸಿಕ್ಕ ಬಿಡಿಸಿ, ಸೀಳಿದ ಬಿದಿರ
ಹೊರೆಹೊರೆಯಲ್ಲಿ ನೆಯಿದೆ, ತೊಟ್ಟಿಲ ಸಂದ ಕಾಣದಂತೆ.
ನಾಲ್ಕು ಕಾಲನಿಕ್ಕಿ, ಅಂದಅಂದವಾದ ತೊಟ್ಟಿಲ ದಂಡೆಯನಿಕ್ಕಿ,
ಕಟ್ಟುವುದಕ್ಕೆ ಶ್ರುತ ದೃಷ್ಟವೆಂಬೆರೆಡು ದಾರದಲ್ಲಿ
ತೊಟ್ಟಿಲ ಕಟ್ಟಿ, ಗವರೇಶ್ವರಲಿಂಗಕ್ಕೆ ಹುಟ್ಟುಗೆಟ್ಟು ಹೋಗೋ
ಎಂದು ಜೋಗುಳವಾಡಿದ ವಚನಕಾರ — ಮೇದರ ಕೇತಯ್ಯ

೪೧೦. ಅದರಿನ ತಲೆ, ಬಿದಿರಿದ ಬಾಯಿ, ಕಾಡಿನ ಹಕ್ಕೆ, ಓಡಿನ ಊಟಿ,
ಹತ್ತಿದ ಹೊಟ್ಟೆ, ಬತ್ತಿದ ಗಲ್ಲ, ಊರಿದ ಚರಣ, ಏರಿದ ಭಾಷೆ
ಇದು ಶರಣಂಗಲ್ಲದೆ ನಡುವಣ ಪುಕ್ಕಟವಾದವರಿಗೆಲ್ಲಿಯದೊ,
ನಿಃಕಳಂಕ ಮಲ್ಲಿಕಾರ್ಜುನ ಎಂದು ಶರಣರ ಲಕ್ಷಣವನ್ನು ಹೇಳಿದವರು — ಮೋಳಿಗೆ ಮಾರಯ್ಯ

೪೧೧. ತೊಳೆದಡೆ ಮಡಿ, ಮಾಸಿದಡೆ ಮೈಲಿಗೆ. ಅರಿದಡೆ ತಾನು,
ಮರೆದಡೆ ಜಗದೊಳಗೆಂಬುದನರಿ. ಹಿಡಿದು ಬಿಟ್ಟೊಡನೆ ಕೈಮೀರಿದಡೆ,
ಮತ್ತೆ ಮರುಗಿದಡಿಲ್ಲ ಜಾಂಬೇಶ್ವರ ಎಂದ ವಚನಕಾರ —ರಾಯಸದ ಮಂಚಣ್ಣ

೪೧೨. ಆವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರುಲಿಂಗಜಂಗಮದ ಮುಂದಿಟ್ಟು,
ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು ವ್ಯಾಧಿ ಬಂದಡೆ ನರಳು,
ಬೇನೆ ಬಂದಡೆ ಒರಲು, ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ,
ಭಾಪು ಲದ್ದೆಯ ಸೋಮಾ? ಎಂದು
ದೇವರ ಮೇಲೆ ಎಲ್ಲವನ್ನು ಹಾಕುವ ಪ್ರವೃತ್ತಿಯನ್ನು ಪ್ರಶ್ನಿಸಿದವರು — ಲದ್ದೆಯ ಸೋಮಯ್ಯ

೪೧೩. ಹುಟ್ಟಿಸುವವ ಪೃಥ್ವಿಗೆ ಹಂಗಾದ, ಬೆಳೆಯಿಸುವವ ಅಪ್ಪುವಿಗೆ ಹಂಗಾದ.
ಕೊಯಿಸುವವ ಕಾಲಗೆ ಹಂಗಾದ, ನಿನ್ನನರಿತೆನೆಂಬವ ಶಿಲೆಗೆ ಹಂಗಾದ.
ಇವರೆಲ್ಲರ ಹಂಗಿಗೆ ಹರುಹ ಕೇಳಿಹರೆಂದಂಜಿ, ಅಲೇಖಮಯನಾದ
ಶೂನ್ಯ ಕಲ್ಲಿನ ಮರೆಯಾದೆಯಾ? ಎಂದು ಪ್ರಶ್ನಿಸಿದವರು – **ವಚನಬಂಢಾರಿ ಶಾಂತರಸ**

೪೧೪. ಆಧಾರದಲ್ಲಿ ಸಾಮವೇದ, ಸ್ವಾಧಿಷ್ಠಾನದಲ್ಲಿ ಅಥರ್ವಣವೇದ,
ಮಣಿಪೂರಕದಲ್ಲಿ ಯಜುರ್ವೇದ, ಅನಾಹತದಲ್ಲಿ ಋಗ್ವೇದ,
ಆಜ್ಞೆಯಲ್ಲಿ ಉತ್ತರಖಂಡಣೆ, ವಿಶುದ್ಧಿಯಲ್ಲಿ ಪ್ರಣಮದ ಲಕ್ಷಿತ.
ಇಂತೀ ವೇದವೇದ್ಯರು ನೋಡಾ ಎಮ್ಮವರು.
ಲಲಾಮಭೀಮಸಂಗಮೇಶ್ವರಲಿಂಗವನೊಳಕೊಂಡ
ಶರಣರಂಗ ಎಂದು ಬಣ್ಣಿಸಿದವರು – **ವೇದಮೂರ್ತಿ ಸಂಗಣ್ಣ**

೪೧೫. ಮಯೂರನಾಡಿ, ಮಂಡೂಕನಾಡಿ, ಜಳೂಕನಾಡಿ, ಅಹಿವಳಿನಾಡಿ,
ಮಂಡಲಗಮಕನಾಡಿ, ಷಂಡೇತಪಥನಾಡಿ, ದೀರ್ಘನಾಡಿ, ಅಧಮನಾಡಿ,
ಉತ್ತರನಾಡಿ, ಪೂರ್ವನಾಡಿ, ಪಶ್ಚಿಮನಾಡಿ, ಗಜಗಮನನಾಡಿ, ಹಚ್ಚೋತಿನಾಡಿ,
ವಿಕ್ರಮನಾಡಿ, ಸೂತ್ರನಾಡಿ, ಸಂಚುನಾಡಿ, ಸಂಚಲನಾಡಿ, ಶೈತ್ಯನಾಡಿ,
ಉಷ್ಣನಾಡಿ, ವಿಹಂಗನಾಡಿ, ಕೂರ್ಮನಾಡಿ, ಮರ್ಕಟನಾಡಿ, ಪಿಪೀಲಿಕಾನಾಡಿ, ದಂಷ್ಟ್ರನಾಡಿ,
ಮಕರನಾಡಿ, ಕರ್ಕೋಟಕನಾಡಿ, ಸಮರಸನಾಡಿ, ಸಂತೋಷನಾಡಿ;
ಇಂತೀ ಪ್ರಥಮನಾಡಿಯೊಳಗಾದ ಶರೀರದಲ್ಲಿ ತೋರುವ ನಾಡಿಗಳನ್ನು ಹೇಳುತ್ತಾ
ಈ ವೈದ್ಯದ ಚೀಲವ ಹೊತ್ತು ಗಸಣಿಗೊಳ್ಳುತ್ತಿದ್ದೇನೆ.
ಈ ಕಾಯಕದ ಸೇವೆಯ ಬಿಡಿಸಿ, ಕರಣಪ್ರಸಾದವ ಕೊಟ್ಟು
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ
ನಿಮ್ಮಡಿಯೊಳಗೆನ್ನನಿರಿಸು ಎಂದು ಬೇಡಿಕೊಂಡ ವಚನಕಾರ – **ವೈದ್ಯ ಸಂಗಣ್ಣ**

೪೧೬. ಬಾಹ್ಯವ್ರತ, ಭ್ರಮೆವ್ರತ, ಸೀಮೋಲ್ಲಂಘನವ್ರತ, ಉಪಚರಿಯಕೂಟಸ್ಥವ್ರತ,
ಸಮ್ರಕೀ ಭೋಜನವ್ರತ, ಇಷ್ಟಸಂಬಂಧಕೂಟವ್ರತ, ದ್ರವ್ಯಉಪಚರಿಯ ಸಂಪದವ್ರತ,
ಅಹುದಲ್ಲವೆಂಬ ಸಂದೇಹ ಸಂಕಲ್ಪವ್ರತ, ತಿಲ ಮಧುರ ಕ್ರಮಕ ಲವಣ ಪರಿಪಾಕ
ವಿಸರ್ಜನವ್ರತ, ಗಮನ ಸುಮನ ಸಮತೆ ನೇಮ ಸಂತೋಷವ್ರತ,
ಇಂತೀ ಸೀಮೆಯೊಳಗಾದ ಅರವತ್ತನಾಲ್ಕು ಶೀಲವನರಿದಡೇನು?
ಎಂದು ವ್ರತಂಗಳ ಝೇಂಕಿಸಿ ಅನರ್ಪಿತಕ್ಕೆ ಮನ ಮುಟ್ಟದೆ,
ತಾ ಕೊಂಡ ಸೀಮೆಯಲ್ಲಿ ಭಾವಭ್ರಮೆಯಿಲ್ಲದೆ,
ಮನ ವಚನ ಕಾಯದಲ್ಲಿ ಕೊಂಡ ವ್ರತಕ್ಕೆ ಪೂಜಿಸುವ,
ಗುರುಲಿಂಗ ಜಂಗಮಕ್ಕೆ ಉಭಯದೋರದೆ ನಿಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಸಂದುದು
ಎಂದು ಹೇಳಿಕೊಟ್ಟ ವಚನಕಾರ – **ಶಿವಲೆಂಕ ಮಂಚಣ್ಣ**

೪೧೭. ಆಚಾರವ ನುಡಿವೆ, ಅನಾಚಾರವ ನಡೆವೆ.
ನಮಗೆ ನಿಮಗೆ ಪ್ರಸಾದಸ್ವಾಯತ ನೋಡಾ. ನಾನು ಭಕ್ತನೆಂಬ
ನುಡಿಗೆ, ಸಕಳೇಶ್ವರದೇವ ನಗುವ
ಎಂದು ಸ್ವಯಂ ವಿಮರ್ಶಿಸಿಕೊಳ್ಳುವ ವಚನಕಾರ – **ಸಕಲೇಶ ಮಾದರಸ**

೪೧೮. ನಿಂದಿಸುವನೊಬ್ಬ, ಸ್ತುತಿಸುವನೊಬ್ಬ. ಇವರಿಬ್ಬರು ಪರಮಬಂಧುಗಳು. ಆ ಯೋಗಿಯ
ಪುಣ್ಯವನೊಬ್ಬ ಕೊಂಬ, ಪಾಪವನೊಬ್ಬ ಕೊಂಬ. ಇದು ಕಾರಣ, ಗುರುಪ್ರಿಯ ಚೆನ್ನಬಂಕೇಶ್ವರನಲ್ಲಿ
ಸತ್ಯಶರಣರು ನಿತ್ಯಮುಕ್ತರು ಎಂದು ಸಾರಿಕೊಂಡ ವಚನಕಾರ – **ಸುಂಕದ ಬಂಕಣ್ಣ**

೪೧೯. ನೆರೆಮನೆಯಲ್ಲಿ ಸಿರಿಯಿರ್ದಡೆ ಕಾರಣವೇನು?
ಪುರಾತನರ ವಚನ ವಚಿಸಿದಲ್ಲಿ ಫಲವೇನು?
ವಚನದಂತೆ ತಾನಿಲ್ಲ, ತನ್ನಂತೆ ವಚನವಿಲ್ಲ.
ಮೂಗಿಲ್ಲದವರು ಕನ್ನಡಿಯ ನೋಡಿದಡೆ ಶೃಂಗಾರ
ಮೆರೆವುದೇ, ದೇವರಾಯ ಸೊಡ್ಡಳಾ
ಎಂದು ನಡೆ–ನುಡಿಗಳು ಒಂದಾಗಬೇಕೆಂದು ಬಯಸಿದ ವಚನಕಾರ – **ಸೊಡ್ಡಳ ಬಾಚರಸ**

೪೨೦. ಕಾಡಬೇಡ ಕಂಡವರ, ಬೇಡಬೇಡ ನರರುಗಳ, ಆಡಬೇಡ ಅನೃತವ,
ನೋಡಬೇಡ ಪರಸ್ತ್ರೀಯರ,
ಗಾಢಗಂಭೀರ ಲಿಂಗಾರೂಢವಾದ ಬಸವಪ್ರಿಯ ಕೂಡಲಚೆನ್ನಬಸವಣ್ಣ
ಎಂದು ಹೇಳಿದವರು – **ಹಡಪದ ಅಪ್ಪಣ್ಣ**

೪೨೧. ಕಟ್ಟಬೇಕು ಮನವ, ಮೆಟ್ಟಬೇಕು ಮದವ, ಸುಟ್ಟುರುಹಬೇಕು ಸಪ್ತವ್ಯಸನಂಗಳ,
ಆ ತೊಟ್ಟಿಲ ಮುರಿದು ಕಣ್ಣಿಯ ಹರಿದು ಆ ಬಟ್ಟಬಯಲಲ್ಲಿ ನಿಂದಿರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ ಎಂದು ಮನವ ಕಟ್ಟಿದವರು – **ಹಡಪದ ಅಪ್ಪಣ್ಣ**

೪೨೨. ನಿರವಯ ನಿರಾಮಯಂ ನಿರಾಕುಳಂ ನಿರ್ದ್ವಂದ್ವಂ
ನಿರ್ಮಳ ನಿಜಸ್ವರೂಪಂ ನಿರ್ಭಾವ ನಿಃಪುರುಷ ನಿರಂಜನ ನಿರಾಕಾರಂ
ನಿರಾವರಣ ನಿರುಪಮ ನಿರ್ಗುಣ ನಿರಾಧಾರ ನಿರಾಲಂಬಂ
ಸರ್ವಾಧಾರ ಸದಾಶಿವಂ ಅತ್ಯತಿಷ್ಠದ್ಧಶಾಂಗುಲಂ ನಿತ್ಯನಿಶ್ಚಿಂತಂ;
ನಿರ್ಮಲ ನಿರ್ಮಾಯ ನಿರಾಳಕಂ;
ಹರ ಹರಾ ಶಿವ ಶಿವಾ ಜಯ ಜಯ ಜಯತು ಶರಣ
ಕರುಣಾಕರ ತ್ರಾಹಿ ಮಾಂ ಭಕ್ತಿವತ್ಸಲ
ಮತ್ಪ್ರಾಣನಾಥ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ
ಎಂದು ಶಿವನನ್ನು ಸ್ತುತಿಸಿದವರು – **ತೋಂಟದ ಸಿದ್ಧಲಿಂಗರು**

೪೨೩. ಅಹಂಕಾರಭಾವ, ಅವಿದ್ಯಾಭಾವ, ಜ್ಞಾನಾಜ್ಞಾನಾಭಾವ, ಜ್ಞಾನವಿಕೃತಿಭಾವ,
ವರ್ತನವಿಕೃತಿಭಾವ, ಮೋಹನವಿಕೃತಿಭಾವ ಎಂಬ ಭ್ರಾಂತಿಭಾವವ ಮಾಣಿಸಯ್ಯ.
ಇಂದ್ರಿಯಭಾವ, ವಿಷಯಭಾವ, ಭೂತಭಾವ ಕರಣಭಾವ ವಿಶ್ವತೈಜಸ ಪ್ರಾಜ್ಞವೆಂಬ
ಜೀವಭಾವದ ಭ್ರಮೆಯ ಕಳೆಯಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ ಎಂದು ಪ್ರಾರ್ಥಿಸಿದವರು **– ತೋಂಟದ ಸಿದ್ಧಲಿಂಗರು**

೪೨೪. ಬಿಲ್ಲಕೋಲವಿಡಿದು ಮನ ಬಂದ ಪರಿಯಲ್ಲಿ ಎಚ್ಚಾಡುವಾತ
ಅರ್ತಿಕಾರನಲ್ಲದೆ ಬಿಲ್ಲಗಾರನಲ್ಲವಯ್ಯ.
ಹೊನ್ನು ಹೆಣ್ಣು ಮನ ಬಿಟ್ಟು ಚೆನ್ನಾಗಿ ಮಂಡೆಯ ಬೋಳಿಸಿಕೊಂಡು
ಹಾಡಿದ ವಚನಂಗಳನೇ ಹಾಡಿಕೊಂಡು
ಮುಂದೆ ವಸ್ತುವ ಸಾಧಿಸಿಕೊಳ್ಳಲರಿಯದೆ ಹಸಿದರೆ ತಿರಿದುಂಡು
ಮಾತಿನಮಾಲೆಯ ಕಲಿತಾತ ವಿರಕ್ತನೆಂಬ
ನಾಮಕ್ಕರುಹನಲ್ಲದೆ ಸಂಧಾನಕ್ಕರುಹನಲ್ಲ.
ಅದೇನು ಕಾರಣವೆಂದೊಡೆ ಭಕ್ತಿಯೆಂಬ ಬಿಲ್ಲ ಹಿಡಿದು
ಸಮ್ಯಜ್ಞಾನವೆಂಬ ಹೆದೆಯನೇರಿಸಿ ಲಿಂಗನಿಷ್ಠೆಯೆಂಬ ಬಾಣವ ತೊಟ್ಟು
ಆಕಾಶದ ಮೇಲಣ ಮುಪ್ಪುರದ ಮಧ್ಯದ
ಮಾಣಿಕ್ಯದ ಕಂಭವ ಮುಳುಗಲೆಚ್ಚು ಮಾಯೆಯ ಬಲುಹ ಗೆಲಿದ
ಶರಣನೀಗ ಲಿಂಗಸಂಧಾನಿಯಯ್ಯಾ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ
ಎಂದು ವಿರಕ್ತ – ಶರಣರ ಲಕ್ಷಣವನ್ನು ಹೇಳಿದವರು **– ಘನಲಿಂಗಿದೇವರು**

೪೨೫. ಮನ ಮನವ ಬೆರೆಸಿ, ಸ್ನೇಹ ಬಲಿದ ಬಳಿಕ,
ನಿನ್ನ ನೆನವುತ್ತಿಪ್ಪೆ ನಾನು, ನನ್ನ ನೆನೆವುತ್ತಿಪ್ಪೆ ನೀನು,
ನನಗೂ ನಿನಗೂ ಏನೂ ಹೊರೆಯಿಲ್ಲ. ಇದ ನೀ ಬಲ್ಲೇ. ನಾ ಬಲ್ಲೆ.
ನಿನ್ನನಗಲದಿಪ್ಪೆ ನಾನು, ನನ್ನನಗಲದಿಪ್ಪೆ ನೀನು.
ಚಿನ್ನ ಬಣ್ಣದಂತೆ ಇಪ್ಪೆವಾಗಿ ಇನ್ನು ಭಿನ್ನವುಂಟೆ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಎಂದು ಉಭಯ ಒಂದಾಗಿ ಹಾಡಿದವರು **– ಸ್ವತಂತ್ರ ಸಿದ್ಧಲಿಂಗೇಶ್ವರ**

೪೨೬. ಕಲ್ಲದೇವರು ದೇವರಲ್ಲ, ಮಣ್ಣದೇವರು ದೇವರಲ್ಲ, ಮರದೇವರು ದೇವರಲ್ಲ,
ಪಂಚಲೋಹದಲ್ಲಿ ಮಾಡಿದ ದೇವರು ದೇವರಲ್ಲ, ಸೇತುರಾಮೇಶ್ವರ,
ಗೋಕರ್ಣ ಕಾಶಿ ಕೇದಾರ ಮೊದಲಾಗಿ
ಅಷ್ಟಾಷಷ್ಠಿಕೋಟಿ ಪುಣ್ಯಕ್ಷೇತ್ರಂಗಳಲ್ಲಿಹ ದೇವರು ದೇವರಲ್ಲ.
ತನ್ನ ತಾನರಿದು ತಾನಾರೆಂದು ತಿಳಿದಡೆ
ತಾನೇ ದೇವ ನೋಡಾ ಅಪ್ರಮಾಣ ಕೂಡಲಸಂಗಮದೇವಾ
ಎಂದು ದೇವರನ್ನು ಬಣ್ಣಿಸಿದವರು **– ಬಾಲಸಂಗಯ್ಯ**

೪೨೭. ಮಾದಾರ ಚನ್ನಯ್ಯನ ಬಾಯ ತಾಂಬುಲವ ಮೆಲುವೆ.
ಡೋಹರಕಕ್ಕಯ್ಯನ ಒಕ್ಕುಮಿಕ್ಕುದನುಂಬೆ.
ಚೋಳಿಯಕ್ಕನ ಊಳಿಗದವನಾಗುವೆ. ಶ್ವಪಚಯ್ಯನ ಆಳಾಗಿರುವೆ.
ಇನ್ನುಳಿದ ಸಕಲಗಣಂಗಳ ತೊತ್ತು ಬಂಟ ಲೆಂಕನಾಗಿ
ರಾಜಾಂಗಣ ಬಳಿಯುವೇನಯ್ಯಾ ಅಖಂಡೇಶ್ವರಾ ಎಂದು ಹಾಡಿದವರು **– ಷಣ್ಮುಖಸ್ವಾಮಿಗಳು**

೪೨೮. ಹಗಲು ಹನ್ನೆರಡುತಾಸು ತನ್ನ ಹಂಬಲದಲ್ಲಿ ವೇಳೆ ಕಳೆವುತಿರ್ದೆನವ್ವಾ,
ಇರುಳು ಹನ್ನೆರಡುತಾಸು ತನ್ನನೇ ಎದ್ದೆದ್ದು ನೋಡುತಿರ್ದೆನವ್ವಾ.
ಅಖಂಡೇಶ್ವರನೆಂಬ ನಲ್ಲನ ಹಂಬಲದಿಂದ
ಸರ್ವಸಂಗವ ತೊರೆದೆನು ನೋಡಿರವ್ವಾ ಎಂದು ಹೇಳಿಕೊಂಡವರು **– ಷಣ್ಮುಖಸ್ವಾಮಿಗಳು**

೪೨೯. ರಕ್ಷಿಗೆ ಒತ್ತೆಯ ಕೊಟ್ಟ ಶಿಶುವಿನಂತೆ, ಕಟುಕಗೆ ಮಾರಿದ ಕುರಿಯಂತೆ,
ಕಮ್ಮಾರಗೆ ಮಾರಿದ ಕಬ್ಬಿಣದಂತೆ, ಅಕ್ಕಸಾಲಿಗೆ ಮಾರಿದ ಸೀಸದಂತೆ,
ಮಾಯಾಭ್ರಮೆಗೆನ್ನ ಮಾರಿ, ಕರಗಿಸಿ ಕೊರಗಿಸಿ ಕೋಯಿಸಿ ತಿನಿಸಿ
ಸುಟ್ಟು ಸೂರೆಮಾಡಿ ಎನ್ನ ಕಾಡುತ್ತಿದ್ದೆಯಲ್ಲ!
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೇ
ಎಂದು ನಿವೇದಿಸಿದವರು **– ಹೇಮಗಲ್ಲ ಹಂಪ**

೪೩೦. ಜಯಜಯ ನಿತ್ಯನಿರಂಜನ ಪರಶಿವ, ಜಯಜಯ ಅಮೃತಕರ,
ಜಯ ಸದಾನಂದ, ಜಯ ಕರುಣಾಜಲ, ಜಯ ಭಕ್ತರೊಂದ್ಯ,
ಜಯ ಜ್ಞಾನಸಿಂಧು, ಜಯ ಕರ್ಮವಿದೂರ,
ಜಯ ಚಿನ್ಮಯ ಚಿದ್ರೂಪ, ಜಯ ಜಗದೀಶ ಎನ್ನವಗುಣವ ನೋಡದೆ ರಕ್ಷಿಸು
ಜಯಜಯ ಹರಹರ ಶಿವಶಿವ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೇ
ಎಂದು ಪ್ರಾರ್ಥಿಸಿದವರು **– ಹೇಮಗಲ್ಲ ಹಂಪ**

# ೪. ವಚನ ಚಳವಳಿಯ ಬಗ್ಗೆ ಮತ್ತಷ್ಟು

೪೩೧. ವಚನಕಾರರು ಇದ್ದ ಕಾಲ – **ಹನ್ನೆರಡನೆಯ ಶತಮಾನ**

೪೩೨. ವಚನಕಾರರು ವೃತ್ತಿಗೆ ಕೊಟ್ಟ ಹೆಸರು – **ಕಾಯಕ**

೪೩೩. ವಚನಕಾರರು ಪ್ರಸಾದಕ್ಕೆ ಕೊಟ್ಟ ಹೆಸರು – **ದಾಸೋಹ**

೪೩೪. ವಚನ ಚಳವಳಿಯ ಸ್ಥಾಪಕ ಸಂಚಾಲಕ – **ಬಸವಣ್ಣ**

೪೩೫. ವಚನ ಚಳವಳಿಯ ಕೇಂದ್ರ ಸ್ಥಾನ – **ಕಲ್ಯಾಣ**

೪೩೬. ವಚನ ಚಳವಳಿಕಾರರ ಉಪಾಸನಾ ಮಾಧ್ಯಮ – **ಇಷ್ಟಲಿಂಗ**

೪೩೭. ವಚನ ಚಳವಳಿಕಾರರ ಸಭಾಂಗಣ – **ಅನುಭವ ಮಂಟಪ**

೪೩೮. ವಚನ ಚಳವಳಿಕಾರರ ಸಿಂಹಾಸನ – **ಶೂನ್ಯ ಪೀಠ**

೪೩೯. ವಚನ ಚಳವಳಿಕಾರರ ಪ್ರಥಮ ಅಧ್ಯಕ್ಷ – **ಅಲ್ಲಮಪ್ರಭು**

೪೪೦. ವಚನಕಾರರು ಮರಣವನ್ನು ಬಣ್ಣಿಸಿದ್ದು – **ಮರಣವೆ ಮಹಾನವಮಿ**

೪೪೧. ವಚನಕಾರ ಕಲ್ಪನೆಯಲ್ಲಿ ಭಕ್ತ – ದೇವರ ಸಂಬಂಧ – **ಶರಣಸತಿ ಲಿಂಗಪತಿ**

೪೪೨. ವಚನಕಾರರ ಭಾಷಾ ಮಾಧ್ಯಮ – **ಕನ್ನಡ**

೪೪೩. ಕನ್ನಡ ನಾಡಿನ ಪ್ರಥಮ ಪ್ರಜಾಸಾಹಿತ್ಯ – **ವಚನ ಸಾಹಿತ್ಯ**

೪೪೪. ಕನ್ನಡ ನಾಡಿನ ಪ್ರಥಮ ಪ್ರಜಾ ಚಳವಳಿ – **ವಚನ ಚಳವಳಿ**

೪೪೫. ಸಾಹಿತ್ಯಕ್ಕೆ ಸಾಹಿತ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವುದು – **ವಚನ ವಾಙ್ಮಯ**

೪೪೬. ವ್ಯಕ್ತಿ ಕಲ್ಯಾಣದೊಂದಿಗೆ ಸಮಾಜದ ಕಲ್ಯಾಣಕ್ಕೂ ಕರೆಕೊಟ್ಟಿದ್ದು – **ವಚನ ಚಳವಳಿ**

೪೪೭. ವಚನ ಚಳವಳಿಯ ವಿವಿಧ ಘಟ್ಟಗಳು – **೧೨, ೧೫ ಮತ್ತು ೧೮ನೆಯ ಶತಮಾನ**

೪೪೮. ವಚನ ಚಳವಳಿಯ ಸಂವಾದ ಸಂಕಲನರೂಪ – **ಶೂನ್ಯ ಸಂಪಾದನ ಗ್ರಂಥ**

೪೪೯. ಶೂನ್ಯ ಸಂಪಾದನೆಗಳ ಸಂಕಲನಕಾರರು – **ನಾಲ್ವರು, ಶಿವಗಣಪ್ರಸಾದಿ ಮಹಾದೇವಯ್ಯ, ಗುಮ್ಮಳಾಪುರ ಸಿದ್ಧಲಿಂಗಯತಿ, ಗುಳೂರು ಸಿದ್ಧವೀರಣ್ಣೊಡೆಯ, ಹಲಗೆಯಾರ್ಯ**

೪೫೦. ವಚನಧರ್ಮದ ಷಟ್‌ಸ್ಥಲಗಳು – **ಭಕ್ತಸ್ಥಲ, ಮಹೇಶ ಸ್ಥಲ, ಪ್ರಸಾದಿ ಸ್ಥಲ, ಪ್ರಾಣಲಿಂಗಿ ಸ್ಥಲ, ಶರಣ ಸ್ಥಲ ಮತ್ತು ಐಕ್ಯಸ್ಥಲ**

೪೫೧. ವಚನಧರ್ಮದ ಅಷ್ಟಾವರಣಗಳು – **ಗುರು, ಲಿಂಗ, ಜಂಗಮ, ಭಸ್ಮ, ರುದ್ರಾಕ್ಷಿ, ಮಂತ್ರ, ಪಾದೋದಕ ಮತ್ತು ಪ್ರಸಾದ**

೪೫೨. ವಚನಧರ್ಮ ಪಂಚಾಚಾರಗಳು – **ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ**

## ೫. ವಚನಗಳ ಪಲ್ಲವಿ

**(ಈ ವಿಭಾಗದಲ್ಲಿ ವಚನಗಳ ಮಧ್ಯ ಅಥವಾ ಅಂತಿಮ ಭಾಗವನ್ನು ಹಾಡಲಾಗುವುದು. ಆ ವಚನದ ಪ್ರಾರಂಭವನ್ನು ಸ್ಪರ್ಧಾರ್ಥಿಗಳು ಹಾಡಬೇಕು)**

೪೫೩. **ಕೂಡಲ ಸಂಗಮದೇವ ಕನ್ನೆಯ ಸ್ನೇಹದಂತಿತ್ತು**
ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು.
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು.
ನನೆಯೊಳಗಣ ಪರಿಮಳದಂತಿದ್ದಿತ್ತು.

೪೫೪. **ಜಗದ ನೆಂಟ ನೀನೇ ಅಯ್ಯಾ, ಕೂಡಲಸಂಗಮದೇವಯ್ಯಾ!**
ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ,
ಚಂದ್ರ ಕುಂದೆ, ಕುಂದುವುದಯ್ಯಾ,
ಚಂದ್ರಂಗೆ ರಾಹು ಅಡ್ಡಬಂದಲ್ಲಿ
ಅಂಬುಧಿಯ ಮುನಿ ಆಪೋಶನವ ಕೊಂಬಲ್ಲಿ
ಚಂದ್ರಮನಡ್ಡ ಬಂದನೆ, ಅಯ್ಯಾ?
ಅರಿಗಾರೂ ಇಲ್ಲ, ಕೆಟ್ಟವಂಗೆ ಕೆಳೆಯಿಲ್ಲ.

೪೫೫. **ನೀನೊಲಿದಡೆ ಸಕಲ ಪಡಿಪದಾರ್ಥ ಇದಿರಲ್ಲಿರ್ಪುವು ಕೂಡಲಸಂಗಮದೇವಾ**
ನೀನೊಲಿದರೆ ಕೊರಡು ಕೊನರುವುದಯ್ಯಾ
ನೀನೊಲಿದಡೆ ಬರಡು ಹಯನುಹುದಯ್ಯಾ
ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ

೪೫೬. **ಕೂಡಲಸಂಗಮದೇವರನರಿವಡೆ ಶರಣರ ಸಂಗವೇ ಮೊದಲು**
ಮಡಕೆಯ ಮಾಡುವಡೆ ಮಣ್ಣೆ ಮೊದಲು
ತೊಡಿಗೆಯ ಮಾಡುವಡೆ ಹೊನ್ನೆ ಮೊದಲು
ಶಿವಪಥವರಿವಡೆ ಗುರುಪಥವೇ ಮೊದಲು

೪೫೭. **ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲಸಂಗಮದೇವನ.**
ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ,.
ಕಾಲ ಮೇಲೆ ಕೈಯ್ಯನೂರಿ ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ,

೪೫೮. **ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ.**
ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ

೪೫೯. **ಬಳ್ಳಿಗೆ ಕಾಯಿ ದಿಮ್ಮೆತ್ತೆ, ಕೂಡಲಸಂಗಮದೇವಾ**

ಎನ್ನ ವಾಮ–ಕ್ಷೇಮ ನಿಮ್ಮದಯ್ಯಾ.
ಎನ್ನ ಹಾನಿ–ವೃದ್ಧಿ ನಿಮ್ಮದಯ್ಯಾ,
ಎನ್ನ ಮಾನಾಪಮಾನವೂ ನಿಮ್ಮದಯ್ಯಾ.

೪೬೦. **ನೊಸಲ ವಿಭೂತಿಯೇ ಶೃಂಗಾರ**

ನೀರಿಂಗೆ ನೈದಿಲೆಯೆ ಶೃಂಗಾರ, ಸಮುದ್ರಕೆ ತೆರೆಯೆ ಶೃಂಗಾರ,
ನಾರಿಗೆ ಗುಣವೆ ಶೃಂಗಾರ,
ಗಗನಕ್ಕೆ ಚಂದ್ರಮನೆ ಶೃಂಗಾರ,
ನಮ್ಮ ಕೂಡಲಸಂಗನ ಶರಣರಿಗೆ

೪೬೧. **ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ**
**ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ.**

ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ,
ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ,
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ

೪೬೨. **ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವ**

ನಂಬರು ನೆಚ್ಚರು ಬರಿದೆ ಕರೆವರು, ನಂಬಲರಿಯರೀ ಲೋಕದ ಮನುಜರು.
ನಂಬಿ ಕರೆದಡೋ ಎನ್ನನೆ ಶಿವನು? ನಂಬದೆ ನಚ್ಚದೆ ಬರಿದೆ ಕರೆವರ

೪೬೩. **ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ.**

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ

೪೬೪. **ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ.**

ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯಾ.
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯಾ.
ನಾದವ ನುಡಿಸಿದ ರಾವಳಂಗೆ ಅರೆ ಆಯುಷ್ಯವಾಯಿತ್ತು.
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು.
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ,

೪೬೫. **ಅಲ್ಲದಿದ್ದಡೆ ನಡುನೀರಲದ್ದುವ ನಮ್ಮ ಕೂಡಲಸಂಗಮದೇವ.**

ಬರಬರ ಭಕ್ತಿ ಅರೆಯಾಯಿತ್ತು ಕಾಣಿರಣ್ಣಾ :
ಮೊದಲದಿನ ಹಣೆಮುಟ್ಟಿ, ಮರುದಿನ ಕೈಮುಟ್ಟಿ,
ಮೂರೆಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ.
ಹಿಡಿದುದ ಬಿಡದಿದ್ದಡೆ ಕಡೆಗೆ ಚಾಚುವ,

೪೬೬. **ಎನಗೆ ನಮ್ಮ ಕೂಡಲಸಂಗನ ಶರಣರ ನೆನೆವುದೆ ಚಿಂತೆ**

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ,
ಅಂಬುಜಕೆ ಭಾನುವಿನ ಉದಯದ ಚಿಂತೆ,
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ

೪೬೭. **ನಿಮ್ಮ ಚರಣಕಮಲದೊಳಗಾನು ತುಂಬಿ**

ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ
ಕಿವಿಯಲ್ಲಿ ಕೀರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕೂಡಲಸಂಗಮದೇವಾ

೪೬೮. **ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದರೆಂಬೆ ಕೂಡಲಸಂಗಮದೇವಾ**

ಹೊಯಿದವರೆನ್ನ ಹೊರೆದವರೆಂಬೆ, ಬಯಿದವರೆನ್ನ ಬಂಧುಗಳೆಂಬೆ,
ನಿಂದಿಸಿದವರೆನ್ನ ತಂದೆತಾಯಿಗಳೆಂಬೆ, ಆಳಿಗೊಂಡವರೆನ್ನ ಆಳ್ದವರೆಂಬೆ,
ಜರಿದವರೆನ ಜನ್ಮಬಂಧುಗಳೆಂಬೆ,

೪೬೯. **ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ.**

ಹೊನ್ನು ಮಾಯೆ ಎಂಬರು, ಹೊನ್ನು ಮಾಯೆಯಲ್ಲ.
ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ,
ಮಣ್ಣು ಮಾಯೆ ಎಂಬರು, ಮಣ್ಣು ಮಾಯೆಯಲ್ಲಾ.

೪೭೦. **ಎತ್ತನೇರಿ ಎತ್ತನರುಸವವರು, ಎತ್ತ ಹೋದರೈ ಗುಹೇಶ್ವರಾ?**

ಭಾವದಲ್ಲೊಬ್ಬ ದೇವರ ಮಾಡಿ, ಮನದಲೊಂದು ಭಕ್ತಿಯ ಮಾಡಿದಡೆ,
ಕಾಯದ ಕೈಯ್ಯಲ್ಲಿ ಕಾರ್ಯವುಂಟೆ? ವಾಯಕ್ಕೆ ಬಳಲುವರು ನೋಡಾ.

೪೭೧. **ಗುಹೇಶ್ವರ ಲಿಂಗಕ್ಕೂ ಎನಗೆಯೂ ಎತ್ತಣದಿಂದೆತ್ತ ಸಂಬಂಧವಯ್ಯಾ**

ಎತ್ತಣ ಮಾಮರ ಎತ್ತಣ ಕೋಗಿಲೆ, ಎತ್ತಣಿದಿಂದೆತ್ತ ಸಂಬಂಧವಯ್ಯಾ
ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪು, ಎತ್ತಣಿದಿಂದೆತ್ತ ಸಂಬಂಧವಯ್ಯಾ

೪೭೨. **ಗುಹೇಶ್ವರ ನಿಮ್ಮ ಶರಣರು, ಹಿಂದೆ ಲಿಂಗವನಿರಿಸಿ ಹೋದರು.**

ಮರ್ತ್ಯಲೋಕದ ಮಾನವರು; ದೇಗುಲದೊಳಗೊಂದು ದೇವರ ಮಾಡಿದಡೆ, ಆನು ಬೆರಗಾದೆನು.
ನಿಚ್ಚಕ್ಕೆ ನಿಚ್ಚ ಅರ್ಚನೆ ಪೂಜೆಯ ಮಾಡಿಸಿ, ಭೋಗವ ಮಾಡುವವರ ಕಂಡು ನಾನು ಬೆರಗಾದೆನು

೪೭೩. **ಲಿಂಗವೆಂಬುದೊಂದು ಅನಂತದ ಹೆಸರು, ಗುಹೇಶ್ವರನೆಂಬುದದೇನೋ?**
ಊರೊಳಗೊಬ್ಬ ದೇವ, ಮಡುವಿನಲೊಬ್ಬ ದೇವ, ಅಡವಿಯೊಲೊಬ್ಬ ದೇವ, ಮಡಿಲಲೊಬ್ಬ ದೇವ,
ನೀರು ನೀರ ಕೂಡಿ, ಬಯಲು ಬಯಲ ಕೂಡಿ, ನರನೆಂಬ ದೇವ ತಾ ನಿರಾಳವೋ !

೪೭೪. **ಅರುಹಿನ ಕುರುಹಿನ ಮರಹಿನೊಳಗೆ, ಗುಹೇಶ್ವರನೆಂಬುದು ತಾ ಬಯಲು !**
ಅರಿದೆನೆಂಬುದು ತಾ ಬಯಲು, ಅರಿಯೆನೆಂಬುದು ತಾ ಬಯಲು

೪೭೫. **ಚೆನ್ನಮಲ್ಲಿಕಾರ್ಜುನನ ಹೆತ್ತ ತಂದೆ ಸಂಗನ ಬಸವಣ್ಣನು ಎನಗೀ ಕ್ರಮವನುರುಹಿದನಯ್ಯ ಪ್ರಭುವೆ.**
ಅಂಗದಲ್ಲಿ ಆಚಾರವ ತೋರಿದ; ಆ ಆಚಾರವೇ ಲಿಂಗವೆಂದು ಅರುಹಿದ.
ಪ್ರಾಣದಲ್ಲಿ ಅರಿವ ನೆಲೆಗೊಳಿಸಿದ; ಆ ಅರಿವೆ ಜಂಗಮವೆಂದು ತೋರಿದ

೪೭೬. **ಅಂಗಭಂಗ ಮನಭಂಗವಳಿದು ನಿಮ್ಮನೆಂದಿಂಗೊಮ್ಮೆ ನೆರೆವೆನಯ್ಯಾ ಚೆನ್ನಮಲ್ಲಿಕಾರ್ಜುನ** ?
ಇಂದ್ರನೀಲದ ಗಿರಿಯನೇರಿಕೊಂಡು ಚಂದ್ರಕಾಂತದ ಶಿಲೆಯನಪ್ಪಿಕೊಂಡು
ಕೊಂಬ ಬಾರಿಸುತ್ತ ಎಂದಿಪ್ಪೆನೋ ಶಿವನೆ? ನಿಮ್ಮ ನೆನೆವುತ್ತ ಎಂದಿಪ್ಪೆನೋ?

೪೭೭. **ಎನಗೆ ಚೆನ್ನಮಲ್ಲಿಕಾರ್ಜುನದೇವರು ಒಲಿವರೋ ಒಲಿಯರೋ ಎಂಬ ಚಿಂತೆ !**
ಎಮ್ಮೆಗೊಂದು ಚಿಂತೆ; ಸಮ್ಮಗಾರಗೊಂದು ಚಿಂತೆ. ಧರ್ಮಿಗೊಂದು ಚಿಂತೆ;
ಕರ್ಮಿಗೊಂದು ಚಿಂತೆ, ಎನಗೆ ಎನ್ನ ಚಿಂತೆ, ತನಗೆ ತನ್ನ ಕಾಮದ ಚಿಂತೆ.
ಒಲ್ಲೆ ಹೋಗು, ಸೆರಗ ಬಿಡು ಮರುಳೆ.

೪೭೮. **ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನಾ** ?
ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ? ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ? ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ?

೪೭೯. **ಚೆನ್ನಮಲ್ಲಿಕಾರ್ಜುನಯ್ಯಾ, ನೀನೊಲಿದ ಶರಣಂಗೆ ನಿಸ್ಸೀಮಸುಖವಯ್ಯಾ.**
ತುಂಬಿದುದು ತುಳುಕದು ನೋಡಾ. ನಂಬಿದುದು ಸಂದೇಹಿಸದು ನೋಡಾ.
ಒಲಿದುದು ಓಸರಿಸದು ನೋಡಾ. ನೆರೆಯರಿದುದು ಮರೆಯದು ನೊಡಾ.

೪೮೦. **ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ ಎನಗೆ ಬೇರೆ ವಿಚಾರವುಂಟೆ, ಕೂಡಲಸಂಗಮದೇವಾ?**
ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ.
ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ.
ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ.

## ೬. ಕೆಲವು ಪಾರಿಭಾಷಿಕ ಶಬ್ದಗಳು

೪೮೧. **ಅಕ್ಷರತ್ರಯ** – ಅಕಾರ, ಉಕಾರ, ಮಕಾರ (ನಾದ, ಬಿಂದು, ಕಳೆ)

೪೮೨. **ಅಂಗತ್ರಯ** – ತ್ಯಾಗಾಂಗ, ಭೋಗಾಂಗ, ಯೋಗಾಂಗ

೪೮೩. **ಅವಸ್ಥಾತ್ರಯ** – ಜಾಗ್ರ, ಸ್ವಪ್ನ, ಸುಷುಪ್ತಿ

೪೮೪. **ಅರ್ಪಣತ್ರಯ** – ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣ

೪೮೫. **ಅಂತಃಕರಣ ಪಂಚಕ** – ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ

೪೮೬. **ಅಷ್ಟಮದ** – ಕುಲ, ಧನ, ರೂಪು, ಯೌವ್ವನ, ವಿದ್ಯೆ, ಅಧಿಕಾರ, ತಪ

೪೮೭. **ಅಷ್ಟಮಲ** – ಹೊನ್ನು, ಹೆಣ್ಣು, ಮಣ್ಣು, ಅನ್ನ, ನೀರು, ವಸ್ತ್ರ, ವಾಹನ, ಅಭರಣ

೪೮೮. **ಅಷ್ಟವಿದಾರ್ಚನೆ** – ಜಲ, ಗಂಧ, ಅಕ್ಷತೆ, ಪುಷ್ಪಪತ್ರೆ, ಧೂಪ, ದೀಪ, ನೈವೇದ್ಯ, ತಾಂಬೂಲ

೪೮೯. **ಅರಿಷಡ್ವರ್ಗ** – ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ

೪೯೦. **ಆತ್ಮತ್ರಯ** – ಜೀವಾತ್ಮ, ಅಂತರಾತ್ಮ, ಪರಮಾತ್ಮ

೪೯೧. **ಕರ್ಮತ್ರಯ** – ಸಂಚಿತ, ಪ್ರಾರಬ್ಧ, ಆಗಾಮಿ

೪೯೨. **ಕಾಯತ್ರಯ** – ಸ್ಥೂಲ, ಸೂಕ್ಷ್ಮ, ಕಾರಣ

೪೯೩. **ಗುರುತ್ರಯ** – ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಾಗುರು

೪೯೪. **ಚತುರ್ಯೋಗ** – ಮಂತ್ರಯೋಗ, ಹಠಯೋಗ, ಲಯಯೋಗ, ರಾಜಯೋಗ

೪೯೫. **ಚತುರ್ವಿಧ ಪುರುಷಾರ್ಥ** – ಧರ್ಮ, ಅರ್ಥ, ಕಾಮ, ಮೋಕ್ಷ

೪೯೬. **ತ್ರಿಕಾಲ** – ಉದಯ, ಮಧ್ಯಾಹ್ನ, ಅಸ್ತಮಾನ

೪೯೭. **ತ್ರಿಗುಣ** – ಸತ್ವ, ರಜ, ತಮ

೪೯೮. **ದಶದಿಕ್ಕು** – ಪೂರ್ವ, ಪಶ್ಚಿಮ ದಕ್ಷಿಣ, ಉತ್ತರ, ಆಗ್ನೇಯ, ನೈರುತ್ಯ, ವಾಯುವ್ಯ, ಈಶಾನ್ಯ, ಊರ್ಧ್ವ, ಅಧಸ್

೪೯೯. **ದಶವಾಯು** – ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ

೫೦೦. **ದೀಕ್ಷಾತ್ರಯ** – ಮಂತ್ರ ದೀಕ್ಷೆ, ಕ್ರಿಯಾದೀಕ್ಷೆ, ವೇದಾದೀಕ್ಷೆ

೫೦೧. **ನವಲಿಂಗ** – ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ, ನಿಃಕಲಲಿಂಗ, ನಿಶೂನ್ಯ ಲಿಂಗ, ನಿರಂಜನ ಲಿಂಗ

೫೦೨. **ಪಂಚಭೂತ** – ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ

೫೦೩. **ಪಂಚಪಾತಕ** – ಪರಧನ, ಪರಸ್ತ್ರೀ, ಪರನಿಂದೆ, ಪರದೈವ, ಪರಹಿಂಸೆ

೫೦೪. **ಪಂಚತೀರ್ಥ** – ನಡೆಶುಚಿ, ನುಡಿಶುಚಿ, ತನುಶುಚಿ, ಮನಶುಚಿ, ಭಾವಶುಚಿ

೫೦೫. **ಪಂಚಕೋಶ** – ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ

೫೦೬. **ಪಂಚೇಂದ್ರಿಯ** – ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ

೫೦೭. **ಪಂಚಶಕ್ತಿ** – ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ

೫೦೮. **ಲಿಂಗತ್ರಯ** – ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ

೫೦೯. **ವೈರಾಗ್ಯಪಂಚಕ** – ಮಸಣ, ಪುರಾಣ, ಪ್ರಸೂತಿ, ಪಿತೃ, ಜ್ಞಾನ

೫೧೦. **ಷಡ್ಲಿಂಗ** – ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ

೫೧೧. **ಷಡ್‌ಭ್ರಮೆ** – ಜಾತಿ, ವರ್ಣ, ಆಶ್ರಮ, ಕುಲ, ಗೋತ್ರ, ನಾಮ

೫೧೨. **ಷಡ್ರಸ** – ಮಧುರ, ಆಮ್ಲ, ಲವಣ, ತಿಕ್ತ, ಕಟು, ಕಷಾಯ

೫೧೩. **ಷಡೂರ್ಮಿ** – ಜರಾ, ಮರಣ, ಶೋಕ, ಮೋಹ, ಹಸಿವು, ತೃಷೆ

೫೧೪. **ಸಪ್ತವ್ಯಸನ** – ತನು, ಮನ, ಧನ, ರಾಜ್ಯ, ವಿಶ್ವ, ಉತ್ಸಾಹ, ಸೇವಕ

೫೧೫. **ಸಪ್ತಧಾತು** – ರಸ, ರುಧಿರ, ಮಾಂಸ, ಮೇದಸ್ಸು, ಅಸ್ತಿ, ಮಜ್ಜೆ, ಶುಕ್ಲ

೫೧೬. **ಏಳು ವಾರಗಳು** – ಭಾನು, ಸೋಮ, ಮಂಗಳ, ಬುಧ, ಗುರು, ಶುಕ್ರ, ಶನಿ

೫೧೭. **ಹದಿನೈದು ತಿಥಿಗಳು** – ಪಾಡ್ಯ, ಬಿದಿಗೆ, ತದಿಗೆ, ಚೌತಿ, ಪಂಚಮಿ, ಷಷ್ಠಿ, ಸಪ್ತಮಿ, ಅಷ್ಟಮಿ, ನವಮಿ, ದಶಮಿ, ಏಕಾದಶಿ, ದ್ವಾದಶಿ, ತ್ರಯೋದಶಿ, ಚರ್ತುರ್ದಶಿ

೫೧೮. **ಹನ್ನೆರಡು ತಿಂಗಳುಗಳು** – ಚೈತ್ರ, ವೈಶಾಖ, ಜ್ಯೇಷ್ಠ, ಆಷಾಢ, ಶ್ರಾವಣ, ಭಾದ್ರಪದ, ಆಶ್ವಯುಜ, ಕಾರ್ತೀಕ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣ,

೫೧೯. **ಆರು ಋತುಗಳು** – ವಸಂತ ಋತು, ಗ್ರೀಷ್ಮ ಋತು, ವರ್ಷ ಋತು, ಶರತ್ ಋತು, ಹೇಮಂತ ಋತು, ಶಿಶಿರ ಋತು,

೫೨೦. **ಇಪ್ಪತ್ತೇಳು ನಕ್ಷತ್ರಗಳು** – ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ, ಮೃಗಶಿರಾ, ಆರಿದ್ರ, ಪುನರ್ವಸು, ಪುಷ್ಯ, ಆಶ್ಲೇಷಾ, ಮಖ, ಪುಬ್ಬ, ಉತ್ತರ, ಹಸ್ತ, ಚಿತ್ತ, ಸ್ವಾತಿ, ವಿಶಾಖ, ಅನೂರಾಧ, ಜ್ಯೇಷ್ಠ, ಮೂಲ, ಪೂರ್ವಾಷಾಢ, ಉತ್ತರಾಷಾಢ, ಶ್ರವಣ, ಧನಿಷ್ಠ, ಶತಭಿಷ, ಪೂರ್ವಾಭಾದ್ರ, ಉತ್ತರಾಭಾದ್ರ, ರೇವತಿ

## ೭. ವಚನಕಾರರ ಪರಂಪರೆ ಕುರಿತಾದ ವಿಷಯಗಳು

೫೨೧. ವಚನಕಾರರನ್ನು ರಗಳೆಗಳಲ್ಲಿ ಚಿತ್ರಿಸಿದ ಕವಿ – **ಹರಿಹರ**

೫೨೨. ನಿನ್ನ ಗೀತಂಗಳಂ ಹರುಷದಿಂ ಪಾಡುತಂ ಎಂದು
ಹಂಪೆಯ ವಿರೂಪಾಕ್ಷನನ್ನು ಸ್ತುತಿಸಿದ ಕವಿ – **ಹರಿಹರ**

೫೨೩. ರಗಳೆಯ ಕವಿ ಎಂದು ಸುಖ್ಯಾತಿ ಪಡೆದ ಕವಿ – **ಹರಿಹರ**

೫೨೪. ತೂಗಾಡು ತೊನೆದಾಡುತಾಹಾ ವಿರೂಪಾಕ್ಷ; ಹೂಗಳಂ ನಡೆ ನೋಡುತಾಹ ವಿರೂಪಾಕ್ಷ
ಎನುತೆ ಹಿಗ್ಗುತ್ತೆ ಹೊಂಗುತ್ತೆ ಹೊಮ್ಮತ್ತಲಿದು ಎನಗಿಂತು ಕರುಣಿಸುವನೆ
ಸದಾಶಿವನೆಂದು ಎಂದು ಹಾಡುತ್ತಾ ಹೊರಟವನು – **ಹರಿಹರ**

೫೨೫. ಏನವ್ವ ಸಂಪಗೆಯೆ ಶಿವನ ಸಿರಿಮುಡಿಗಿಂದು
ನೀನೀವ ಹೊಸಕುಸುಮವಂ ನೀಡು ನೀಡೆಂದು ಕೇಳಿಕೊಂಡ ಕವಿ – **ಹರಿಹರ**

೫೨೬. ಸತ್ಯವೆಂಬುದೇ ಹರನು, ಹರನೆಂಬುದೇ ಸತ್ಯ ಎಂದು ಸಾರಿದ ಕವಿ – **ರಾಘವಾಂಕ**

೫೨೭. ಭೀಮಕವಿಯ ಪ್ರಸಿದ್ಧ ಕಾವ್ಯ – **ಬಸವ ಪುರಾಣ**

೫೨೮. ಪ್ರಭುಲಿಂಗಲೀಲೆಯನ್ನು ಬರೆದವರು – **ಚಾಮರಸ**

೫೨೯. ಶಿವತತ್ತ್ವಚಿಂತಾಮಣಿಯನ್ನು ಬರೆದ ದಂಡನಾಯಕ – **ಲಕ್ಕಣ್ಣದಂಡೇಶ**

೫೩೦. ನೂರೊಂದು ವಿರಕ್ತರ ಕರುಣಾಳು ಈ ವಿಜಯನಗರದ ರಾಯ – **ಪ್ರೌಢದೇವರಾಯ**

೫೩೧. ಬಸವಣ್ಣನವರ ನಂತರ ವಚನಕಾರರಾಗಿ ಬೆಳಗಿ ಮೊಳಗಿದ ಯತಿ – **ಶ್ರೀ ತೋಂಟದ ಸಿದ್ಧಲಿಂಗರು**

೫೩೨. ಶ್ರೀಗುರುಚರಣೋಪದೇಶವನಾಲಿಸಿದಾಗಲೇ ನರರಿಗೆ ಮುಕುತಿ
ಎಂದು ಸಾರಿದವರು – **ಶ್ರೀ ನಿಜಗುಣ ಶಿವಯೋಗಿಗಳು**

೫೩೩. ಜ್ಯೋತಿ ಬೆಳಗುತಿದೆ ಪರಂಜ್ಯೋತಿ ಬೆಳಗುತಿದೆ ಎಂದು ಶಿವಯೋಗಿಗಳು – **ಶ್ರೀ ನಿಜಗುಣರು**

೫೩೪. ಅವರವರ ಭಾವಕ್ಕೆ ಅವರವರ ಭಕುತಿಗೆ ಅವರವರಿಗೆಲ್ಲ ಶಿವ ನೀನೊಬ್ಬನೇ
ಎಂದು ಭಕ್ತಿಯಿಂದ ಸ್ತುತಿಸಿದವರು – **ಮುಪ್ಪಿನ ಷಡಕ್ಷರಿಗಳು**

೫೩೫. ಲಿಂಗಪೂಜೆಯ ಮಾಡಿರೋ ನಿಮ್ಮೊಳು ಪ್ರಾಣ ಲಿಂಗಪೂಜೆಯ ಮಾಡಿರೋ
ಎಂದು ಕರೆನೀಡಿದವರು – **ಶ್ರೀ ಸರ್ಪಭೂಷಣ ಶಿವಯೋಗಿಗಳು**

೫೩೬. ಅನುಭಾವದಡಿಗೆಯ ಮಾಡಿ ಅದಕ್ಕನುಭಾವಿಗಳು ಬಂದು
ನೀವೆಲ್ಲಾ ಕೂಡಿ ಎಂದು ಹೇಳಿದವರು – **ಶ್ರೀ ಸರ್ಪಭೂಷಣ ಶಿವಯೋಗಿಗಳು**

೫೩೭. ಕಾವ್ಯಾನಂದರು ಆಧುನಿಕ ವಚನಕಾರರೂ ಹೌದು – **ಡಾ॥ ಸಿದ್ಧಯ್ಯ ಪುರಾಣಿಕ**

೫೩೮. ಸಾಹಿತ್ಯ ಸಿಂಹಾಸನಾಧೀಶ್ವರ ಎಂದು ಖ್ಯಾತರಾದ ಸ್ವಾಮಿಗಳು – **ಡಾ॥ ಜ.ಚ.ನಿ.**

೫೩೯. ತ್ರಿವಿಧ ದಾಸೋಹಿಗಳೆಂದು ಬಣ್ಣಿತರಾಗಿರುವ
ಶತಾಯುಷಿ ಶಿವಯೋಗಿಗಳು – **ಡಾ॥ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು**

೫೪೦. ವಿದ್ಯಾರ್ಥಿ ನಿಲಯಕ್ಕಾಗಿ ಚಿನ್ನದ ಕರಡಿಗೆಯನ್ನೇ
ಒತ್ತೆಇಟ್ಟ ಸ್ವಾಮಿಗಳು – **ಸುತ್ತೂರು ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು**

೫೪೧. ಹೈದ್ರಾಬಾದ್ ಕರ್ನಾಟಕದಲ್ಲಿ ಕನ್ನಡ ಸಂಸ್ಕೃತಿಯನ್ನು
ಉಳಿಸಿ ಬೆಳೆಸಿದ ಶಿವಯೋಗಿಗಳು – **ಭಾಲ್ಕಿಯ ಹೀರೆಮಠದ ಶ್ರೀ ಚನ್ನಬಸವ ಪಟ್ಟದ್ದೇವರು**

೫೪೨. ಮುಂಬೈ ಕರ್ನಾಟಕದಲ್ಲಿ ಕನ್ನಡ ಸಂಸ್ಕೃತಿಗೆ ಒತ್ತಾಸೆಯಾಗಿರುವ ಶ್ರೀಮಠ – **ನಾಗನೂರು ಮಠ**

೫೪೩. ಸಂಸ್ಕೃತಿಪ್ರಿಯರಿಗೆಲ್ಲ, ನಾಟಕಪ್ರೇಮಿಗಳಿಗೆಲ್ಲಾ ಈ ಮಠ ಕಾಶಿಯಿದ್ದಂತೆ – **ಸಾಣೇಹಳ್ಳಿ ಮಠ**

೫೪೪. ಇಂಟರ್‌ನೆಟ್ ಜಾಲಕ್ಕೆ ವಚನ ಗಣಕ ಸಂಪುಟವನ್ನು ಸೇರಿಸಿ
ವಚನಶಾಸ್ತ್ರವನ್ನು ವಿಶ್ವಕ್ಕೆ ಕೊಂಡೊಯ್ದ
ಡಾಕ್ಟರ್ ಸ್ವಾಮಿಗಳು – **ಸಿರಿಗೆರೆಯ ಡಾ॥ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು**

೫೪೫. ವಚನಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ಕನ್ನಡಿಗರಿಗೆ ನೀಡಿದ ಮಹಾನುಭಾವರು – **ಡಾ. ಫ.ಗು. ಹಳಕಟ್ಟಿ**

೫೪೬. ಬಸವ ಜಯಂತಿಯನ್ನು ಕರ್ನಾಟಕದ ದಾವಣಗೆರೆಯಲ್ಲಿ
ಪ್ರಥಮ ಬಾರಿಗೆ ಆರಂಭ ಮಾಡಿದ ಕ್ರಾಂತಿಯೋಗಿಗಳು – **ಹರ್ಡೇಕರ್ ಮಂಜಪ್ಪ**

೫೪೭. ದೇಶ ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ
ವಚನ ಸಂಸ್ಕೃತಿಯನ್ನು ಪ್ರಚುರಪಡಿಸುತ್ತಿರುವ ಜಗದ್ಗುರುಗಳು – **ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮಿಗಳು**

೫೪೮. ಉಪನಿಷತ್ ಧಾರೆಯೊಂದಿಗೆ ವಚನಸಾರವನ್ನು
ಜನಮಾನಸದಲ್ಲಿ ಬಿತ್ತುತ್ತಿರುವ ಜ್ಞಾನಯೋಗಿಗಳು – **ಶ್ರೀ ಸಿದ್ದೇಶ್ವರಸ್ವಾಮಿಗಳು**

೫೪೯. ವಚನಜ್ಯೋತಿ ಬಳಗದ ಸಂಸ್ಥಾಪಕರು – **ಪಂಡಿತ ಕೆ.ಪಿ. ಶಿವಲಿಂಗಯ್ಯ**

೫೫೦. ವಚನಜ್ಯೋತಿ ಬಳಗದ ಗೌರವಾಧ್ಯಕ್ಷರು – **ಪ್ರೊ. ಟಿ.ಆರ್. ಮಹಾದೇವಯ್ಯ**

## ೮. ವಚನ ಚಳವಳಿಯ ಕುರಿತು ಅನಿಸಿಕೆಗಳು

೫೫೧. "ಕನ್ನಡ ಸಾಹಿತ್ಯ ಸಂಸ್ಕೃತಿಗೆ ಕಿರೀಟಪ್ರಾಯವಾಗಿರುವುದು ವಚನ ಸಾಹಿತ್ಯ"
ಎಂದು ಹೇಳಿದ ರಸಋಷಿಗಳು – **ರಾಷ್ಟ್ರಕವಿ ಕುವೆಂಪು**

೫೫೨. "ನಾಡಗೀತೆಗೆ ಅರ್ಹವಾದ ಹೆಸರುಗಳೆಂದರೆ ಬುದ್ಧ, ಬಸವಣ್ಣ, ಅಲ್ಲಮಪ್ರಭು,
ಅಕ್ಕಮಹಾದೇವಿ" ಎಂದು ವಚನ ಚಳವಳಿಯನ್ನು ಬಣ್ಣಿಸಿದ
ಮೂಡಿಗೆರೆಯ ಮೋಡಿಗಾರ – **ಪೂರ್ಣಚಂದ್ರ ತೇಜಸ್ವಿ**

೫೫೩. "ನನ್ನ ಜೀವನದ ಎಲ್ಲ ಸಮಸ್ಯೆಗಳಿಗೂ ವಚನ ಸಾಹಿತ್ಯದಿಂದ ಪರಿಹಾರ ಸಿಕ್ಕಿದೆ"
ಎಂದು ಹೇಳಿಕೊಂಡ ಹಿರಿಯ ಪೋಲೀಸ್ ಅಧಿಕಾರಿ – **ಡಾ॥ ಅಜಯ್‌ಕುಮಾರ್ ಸಿಂಗ್**

೫೫೪. "ಉಪನಿಷತ್ತಿನಲ್ಲಿರುವುದೆಲ್ಲವೂ ವಚನ ಸಾಹಿತ್ಯದಲ್ಲಿದೆ.
ಆದರೆ ವಚನ ಸಾಹಿತ್ಯದಲ್ಲಿರುವುದೆಲ್ಲವೂ ಉಪನಿಷತ್ತಿನಲ್ಲಿ ಇಲ್ಲ"
ಎಂದು ವಿಶ್ಲೇಷಿಸಿದ ಹಿರಿಯ ಸ್ವಾತಂತ್ರ್ಯಹೋರಾಟಗಾರ, ಕೇಂದ್ರ ಸಚಿವ, ರಾಜ್ಯಪಾಲ – **ರಂಗನಾಥ ದಿವಾಕರ**

೫೫೫. "ನನ್ನ ಸಾಹಿತ್ಯ ರಚನೆಗೆ ಸ್ಫೂರ್ತಿದಾತರು ಬಸವಣ್ಣನವರು ಹಾಗೂ ಇತರ ವಚನಕಾರರು"
ಎಂದು ಹೇಳಿಕೊಂಡ ಕನ್ನಡ ಕಾದಂಬರಿ ಸಾಮ್ರಾಟ – **ಅನಕೃ**

೫೫೬. "ಕಾನೂನಿನಿಂದಾಗಲಿ, ಪೋಲೀಸರಿಂದಾಗಲಿ ಸಮಾಜವನ್ನು ನಿಯಂತ್ರಣದಲ್ಲಿಡಲು ಸಾಧ್ಯವಿಲ್ಲ.
ಆದರೆ ವಚನಗಳಿಂದ ಸಾಮಾಜಿಕ ಸುವ್ಯವಸ್ಥೆ ಕಾಪಾಡಬಹುದು"
ಎಂದು ಅಭಿಪ್ರಾಯಪಟ್ಟ ಪೋಲಿಸ್ ಮಹಾನಿರ್ದೇಶಕ – **ಡಾ॥ ಅಜಯ್ ಕುಮಾರ್ ಸಿಂಗ್**

೫೫೭. "ವಚನಾಮೃತ ಸವಿದಷ್ಟು ಸವಿ" ಎಂದು ಬಣ್ಣಿಸಿರುವ ಜ್ಞಾನಯೋಗಿಗಳು – **ಶ್ರೀ ಸಿದ್ಧೇಶ್ವರ ಸ್ವಾಮಿಗಳು**

೫೫೮. "ಕನ್ನಡಿಗರೇ ಅದೃಷ್ಟಶಾಲಿಗಳು, ಅವರು ನೇರವಾಗಿ ವಚನಗಳನ್ನು ಓದಿ ಆನಂದಿಸುತ್ತಾರೆ.
ನನಗೆ ಆ ಭಾಗ್ಯವಿಲ್ಲ. ಅನುವಾದಗಳನ್ನೇ ಓದಬೇಕಾಗಿದೆ.
ಮುಂದಿನ ಜನ್ಮದಲ್ಲಿ ನಾನು ಕನ್ನಡಿಗನಾಗಿ ಹುಟ್ಟಲು ಬಯಸುತ್ತೇನೆ.
ಏಕೆಂದರೆ ವಚನಗಳನ್ನು ನೇರವಾಗಿ ಓದಿ ಆನಂದಿಸಲಿಕ್ಕೆ"
ಎಂದು ಹೇಳಿಕೊಂಡ ಮರಾಠಿಯ ಖ್ಯಾತ ಸಂಶೋಧಕರು – **ಡಾ॥ ರಾಮಚಂದ್ರ ಚಿಂತಾಮಣಿ ಢೇರೆ**

೩೪೯. "ಕನ್ನಡ ಸಾಹಿತ್ಯದ ಜೀವರತ್ನಗಳಾಗಿ,
ಕನ್ನಡ ನುಡಿಯ ಚೆಲುವುಗಳಾಗಿ ಬೆಳಗುವ ಹಿರಿಮೆಯ
ಮುತ್ತುಗಳು ವಚನಗಳು" ಎಂದು ಬಣ್ಣಿಸಿದ ಕನ್ನಡದ ಕಣ್ವ – **ಆಚಾರ್ಯ ಬಿ.ಎಂ.ಶ್ರೀ.**

೩೫೦. "ವಚನ ಸಾಹಿತ್ಯ ಎರವಲು ತಂದಿದ್ದಲ್ಲ. ಅದು ಕನ್ನಡದ ಸ್ವಯಾರ್ಜಿತ ಸ್ವತ್ತು.
ವಚನಕಾರರು ಸಂಸ್ಕೃತದ ಆಚಾರ್ಯರಲ್ಲ.
ಅವರು ಅಚ್ಚಕನ್ನಡದ ಬೇಸಾಯಗಾರರು"
ಎಂದು ಸ್ಪಷ್ಟವಾಗಿ ಸಾರಿದ ಕನ್ನಡದ ಹಿರಿಯ ವಿದ್ವಾಂಸ – **ಎಂ.ಆರ್.ಶ್ರೀನಿವಾಸಮೂರ್ತಿ**

## ೯. ಕನ್ನಡ ಸಾಹಿತ್ಯ ಪರಂಪರೆ

೩೫೧. ಕನ್ನಡದ ಪ್ರಾಚೀನ ಶಾಸನ – **ಹಲ್ಮಿಡಿ ಶಾಸನ**

೩೫೨. ದೊರೆತಿರುವ ಕನ್ನಡದ ಮೊದಲ ಗ್ರಂಥ – **ಕವಿರಾಜಮಾರ್ಗ**

೩೫೩. ಶಿವಕೋಟ್ಯಾಚಾರ್ಯನ ಕೃತಿ – **ವಡ್ಡಾರಾಧನೆ**

೩೫೪. ಕನ್ನಡದ ಆದಿಕವಿ ಎಂಬ ಖ್ಯಾತಿಗೆ ಪಾತ್ರರಾಗಿರುವವರು – **ಪಂಪ**

೩೫೫. ಪಂಪನ ಕೃತಿಗಳು – **ಆದಿಪುರಾಣ, ವಿಕ್ರಮಾರ್ಜುನ ವಿಜಯ**

೩೫೬. ಕನ್ನಡದ ರತ್ನತ್ರಯರು – **ಪಂಪ, ರನ್ನ, ಪೊನ್ನ**

೩೫೭. ರನ್ನನ ಪ್ರಸಿದ್ಧ ಕೃತಿ – **ಸಾಹಸಭೀಮ ವಿಜಯ**

೩೫೮. ಶಾಂತಿಪುರಾಣವನ್ನು ಬರೆದಿರುವ ರತ್ನತ್ರಯದ ಕವಿ – **ಪೊನ್ನ**

೩೫೯. ಅಜಿತ ತೀರ್ಥಂಕರ ಪುರಾಣದ ಕರ್ತೃ – **ರನ್ನ**

೩೬೦. ರನ್ನನ ಆಶ್ರಯದಾತೆ – **ದಾನಚಿಂತಾಮಣಿ ಅತ್ತಿಮಬ್ಬೆ**

೩೬೧. ಪಂಚತಂತ್ರವನ್ನು ಬರೆದಿರುವವನು – **ದುರ್ಗಸಿಂಹ**

೩೬೨. ಅಭಿನವ ಪಂಪ ಎಂಬ ಖ್ಯಾತಿಯನ್ನು ಪಡೆದಿರುವವನು – **ನಾಗಚಂದ್ರ**

೩೬೩. ನಾಗಚಂದ್ರನ ಕೃತಿಗಳು – **ಮಲ್ಲಿನಾಥ ಪುರಾಣ, ರಾಮಚಂದ್ರಚರಿತ ಪುರಾಣ**

೩೬೪. ನಾಗಚಂದ್ರನ ಸಮಕಾಲೀನಳಾಗಿ ಬೆಳಗಿರುವ ಕವಯತ್ರಿ – **ಕಂತಿ**

೩೬೫. ಜನ್ನನ ಪ್ರಖ್ಯಾತ ಕೃತಿ – **ಯಶೋಧರ ಚರಿತೆ**

೩೬೬. ಅಮೃತಮತಿ ಈ ಕಾವ್ಯದ ನಾಯಕಿ – **ಯಶೋಧರ ಚರಿತೆ**

೩೬೭. ಭರತೇಶ ವೈಭವವನ್ನು ರಚಿಸಿರುವ ಕವಿ – **ರತ್ನಾಕರವರ್ಣಿ**

೩೬೮. ನೇಮಿಚಂದ್ರನ ಕೃತಿಗಳು – **ಲೀಲಾವತಿ, ನೇಮಿಪುರಾಣ**

೩೬೯. ಅಂಡಯ್ಯನ ಕೃತಿ – **ಕಬ್ಬಿಗರ ಕಾವ**

೩೭೦. ಶಬ್ಧಮಣಿದರ್ಪಣವನ್ನು ಬರೆದವನು – **ಕೇಶಿರಾಜ**

೫೮೧. ಬಸವ ಪುರಾಣವನ್ನು ಕನ್ನಡದಲ್ಲಿ ಬರೆದವನು – **ಭೀಮಕವಿ**
೫೮೨. ಸೋಮೇಶ್ವರ ಶತಕವನ್ನು ಬರೆದವನು – **ಪುಲಿಗೆರೆಯ ಸೋಮನಾಥ**
೫೮೩. ಇದು ಕನ್ನಡ ಭಾರತ – **ಕುಮಾರವ್ಯಾಸ ಭಾರತ**
೫೮೪. ಕುಮಾರವ್ಯಾಸನ ನಿಜ ನಾಮಧೇಯ – **ಗದುಗಿನ ನಾರಣಪ್ಪ**
೫೮೫. ಮಗ್ಗೆಯ ಮಾಯಿದೇವರ ಕೃತಿಗಳು – **ಅನುಭವಸೂತ್ರ, ಶತಕತ್ರಯ, ಪ್ರಭುಗೀತ, ಏಕೋತ್ತರ ಶತಸ್ಥಲದ ತ್ರಿವಿಧ, ಮಗ್ಗೆಯ ಮಾಯಿದೇವನ ವಚನ, ಷಟ್ಸಲ ಗದ್ಯ**
೫೮೬. ಕುಮಾರ ವಾಲ್ಮೀಕಿ ಬರೆದದ್ದು – **ತೊರವೆ ರಾಮಾಯಣ**
೫೮೭. ದಾಸರೆಂದರೆ – **ಪುರಂದರದಾಸರು**
೫೮೮. ಕರ್ನಾಟಕ ಸಂಗೀತದ ಪಿತಾಮಹ ಎಂದು ಪ್ರಸಿದ್ಧರಾದವರು – **ಪುರಂದರದಾಸರು**
೫೮೯. ಆದದ್ದೆಲ್ಲಾ ಒಳಿತೇ ಆಯಿತು ಎಂದು ಹಾಡಿದವರು – **ಪುರಂದರದಾಸರು**
೫೯೦. ಬಿನ್ನಹಕ್ಕೆ ಬಾಯಿಲ್ಲವಯ್ಯಾ ಎಂದು ಬಿನ್ನವಿಸಿದವರು – **ಪುರಂದರದಾಸರು**
೫೯೧. ಮಾನವಜನ್ಮ ದೊಡ್ಡದು, ಅದ ಹಾನಿಮಾಡಿಕೊಳ್ಳದಿರಿ ಹುಚ್ಚಪ್ಪಗಳಿರಾ ಎಂದು ತಿಳಿಹೇಳಿದವರು – **ಪುರಂದರದಾಸರು**
೫೯೨. ಧರ್ಮವೇ ಜಯಮಂತ್ರ ಎಂದು ಸಾರಿದವರು – **ಪುರಂದರದಾಸರು**
೫೯೩. ಮೋಹನ ತರಂಗಣಿಯ ಕರ್ತೃ – **ಕನಕದಾಸರು**
೫೯೪. ರಾಮಧ್ಯಾನ ಚರಿತೆಯನ್ನು ಬರೆದವರು – **ಕನಕದಾಸರು**
೫೯೫. ನಳಚರಿತ್ರೆಯನ್ನು ಚಿತ್ರಿಸಿದವರು – **ಕನಕದಾಸರು**
೫೯೬. ತಲ್ಲಣಸದಿರು ಕಂಡ್ಯ ತಾಳು ಮನವೇ ಎಂದು ಮನವನ್ನು ಸಂತೈಸಿದವರು – **ಕನಕದಾಸರು**
೫೯೭. ರಾಗಿಯ ಪಕ್ಷಪಾತಿ ಈ ದಾಸರು – **ಕನಕದಾಸರು**
೫೯೮. ಉಡುಪಿಯ ಕೃಷ್ಣನನ್ನು ಒಲಿಸಿಕೊಂಡವರು – **ಕನಕದಾಸರು**
೫೯೯. ಕನಕದಾಸರ ಅಂಕಿತ – **ಕಾಗಿನಲೆ ಆದಿಕೇಶವರಾಯ**
೬೦೦. ಗಿಳಿಯು ಪಂಜರದೊಳಗಿಲ್ಲಾ ಎಂದು ಹಾಡಿದವರು – **ಕನಕದಾಸರು**
೬೦೧. ಪೆಣ್ಣಲ್ಲವೆ ತಮ್ಮನೆಲ್ಲ ಹಡೆದ ತಾಯಿ ಎಂದು ಹಾಡಿದವರು – **ಸಂಚಿ ಹೊನ್ನಮ್ಮ**
೬೦೨. ಹದಿಬದೆಯ ಧರ್ಮವನ್ನು ರಚಿಸಿದವರು – **ಸಂಚಿ ಹೊನ್ನಮ್ಮ**
೬೦೩. ಜೈಮಿನಿ ಭಾರತ ಇವರದು – **ಲಕ್ಷ್ಮೀಶ**
೬೦೪. ರಾಜಶೇಖರ ವಿಳಾಸ ಇವರದು – **ಷಡಕ್ಷರದೇವ**
೬೦೫. ಕೆಳದಿನೃಪ ವಿಜಯವನ್ನು ಬರೆದವರು – **ಲಿಂಗಣ್ಣ**

೬೦೬. ಹೆಳವನಕಟ್ಟೆ ಗಿರಿಯಮ್ಮ ಪ್ರಸಿದ್ಧಿಯಾದುದು – **ಹಾಡುಗಬ್ಬಗಳಿಂದ**

೬೦೭. ಮುದ್ರಾಮಂಜೂಷ ಇವರ ಕೃತಿ – **ಕೆಂಪುನಾರಾಯಣ**

೬೦೮. ಮುದ್ದಣ್ಣ ಮನೋರಮೆಯ ನಾಯಕನಿವನು – **ನಂದಳಿಕೆ ಲಕ್ಷ್ಮೀನಾರಾಣಪ್ಪ**

೬೦೯. ಮುದ್ದಣ್ಣನ ಕೃತಿಗಳು – **ರಾಮಪಟ್ಟಾಭಿಷೇಕ, ಅದ್ಭುತ ರಾಮಾಯಣ, ರಾಮಾಶ್ವಮೇಧ**

೬೧೦. ಅಭಿನವ ಕಾಳಿದಾಸ ಎಂದು ಪ್ರಸಿದ್ಧಿ ಪಡೆದವರು – **ಬಸವಪ್ಪ ಶಾಸ್ತ್ರಿ**

೬೧೧. ಕರ್ನಾಟಕದ ಕುಲಪುರೋಹಿತರೆಂಬ ಖ್ಯಾತಿ ಇವರದು – **ಆಲೂರು ವೆಂಕಟರಾಯರು**

೬೧೨. ಸರ್ವಜ್ಞನನ್ನು ಕನ್ನಡಕ್ಕೆ ಮತ್ತೊಮ್ಮೆ ತಂದುಕೊಟ್ಟವರು – **ಉತ್ತಂಗಿ ಚೆನ್ನಪ್ಪ**

೬೧೩. ಇವರು ಕವಿ ಮಾತ್ರವಲ್ಲ, ಕನ್ನಡದ ಮೋಡಿಗಾರರಾದ ಜ್ಞಾನಪೀಠ ಪುರಸ್ಕೃತರು – **ಅಂಬಿಕಾತನಯದತ್ತ**

೬೧೪. ವಿಶ್ವಮಾನವ ಸಂದೇಶ ಇವರು ಕನ್ನಡಕ್ಕೆ ಮೊದಲ ಜ್ಞಾನಪೀಠ ದಕ್ಕಿಸಿಕೊಟ್ಟರು – **ರಾಷ್ಟ್ರಕವಿ ಕುವೆಂಪು**

೬೧೫. ಕನ್ನಡದ ಆಸ್ತಿಗೆ ಜ್ಞಾನಪೀಠವು ಒಲಿದುಬಂದಿತು – **ಮಾಸ್ತಿ ವೆಂಕಟೇಶ ಅಯ್ಯಂಗಾರ್**

೬೧೬. ಪುಸ್ತಕಗಳನ್ನು ತಲೆಯ ಮೇಲೆ ಒತ್ತುಕೊಂಡು ಮಾರಾಟ ಮಾಡುತ್ತಿದ್ದ
ಕನ್ನಡದ ಕಾದಂಬರಿಕಾರ – **ಗಳಗನಾಥರು**

೬೧೭. ಇವರು ಹೆಸರಿಗೆ ಮಾತ್ರ ಡೆಪ್ಯುಟಿ ಅಲ್ಲ, ಕನ್ನಡಕ್ಕೂ ಡೆಪ್ಯೂಟಿ – **ಡೆಪ್ಯೂಟಿ ಚೆನ್ನಬಸಪ್ಪ**

೬೧೮. ಮಂಕುತಿಮ್ಮನ ಕಗ್ಗದ ಮೂಲಕ ಜೀವನಸತ್ಯವನ್ನು ಹೇಳಿದವರು – **ಡಿ.ವಿ. ಗುಂಡಪ್ಪ**

೬೧೯. ಕನ್ನಡದ ಅಶ್ವಿನಿ ದೇವತೆಗಳು – **ತಳುಕಿನ ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ**

೬೨೦. ಇಂಗ್ಲೀಷ್ ಗೀತಗಳಷ್ಟೇ ಅಲ್ಲ ಗದಾಯುದ್ಧಕ್ಕೂ ಇವರು ಹೆಸರುವಾಸಿ – **ಬಿ.ಎಂ.ಶ್ರೀಕಂಠಯ್ಯ**

೬೨೧. ಕಡಲತೀರದ ಭಾರ್ಗವ ಮಾತ್ರವಲ್ಲ ಕನ್ನಡಕ್ಕೂ ಭಾರ್ಗವರಾದ ಜ್ಞಾನಪೀಠರು – **ಡಾ. ಶಿವರಾಮಕಾರಂತ**

೬೨೨. ಬಿಜಾಪುರದ ಗೋಳಗುಮ್ಮಟಕ್ಕಿಂತಲೂ ಕನ್ನಡಕ್ಕೆ ಮಿಗಿಲಾದವರು – **ಫ.ಗು. ಹಳಕಟ್ಟಿ**

೬೨೩. ಬಣ್ಣದ ತಗಡಿನ ತುತ್ತೂರಿಯನ್ನು ಹಾಡಿದಷ್ಟೇ ಅಲ್ಲ
ಮೂಗ್ನಲ್ ಕನ್ನಡ ಪದವಾಡಿದವರು – **ಜಿ.ಪಿ. ರಾಜರತ್ನಂ**

೬೨೪. ಸೊಲ್ಲಾಪುರದ ಧೀರ ಮಹಿಳೆ ಕನ್ನಡ ಸಾಹಿತ್ಯ ಸಮ್ಮೇಳನದ
ಅಧ್ಯಕ್ಷೆಯಾಗಿದ್ದವರು – **ಜಯದೇವಿತಾಯಿ ಲಿಗಾಡೆ**

೬೨೫. ಜ್ಞಾನಪೀಠವನ್ನು ಒಲಿಸಿಕೊಂಡ ಇವರು ಮಹಾನ್ ನಟರು
– ನಿರ್ದೇಶಕರು – ನಾಟಕಕಾರರು – **ಗಿರೀಶ್ ಕಾರ್ನಾಡ್**

೬೨೬. ಜ್ಞಾನಪೀಠವನ್ನು ಪಡೆದ ಇವರು ಅತ್ಯಂತ ಬುದ್ಧಿಜೀವಿಗಳು – **ಯು.ಆರ್. ಅನಂತಮೂರ್ತಿ**

೬೨೭. ಜ್ಞಾನಪೀಠವನ್ನು ಪಡೆದ ಇವರು
ತಮ್ಮ ಹೆಸರಿನ ಚಳವಳಿಯಿಂದ ಎಲ್ಲರಿಗೂ ಚಿರಪರಿಚಿತರು – **ವಿ.ಕೃ. ಗೋಕಾಕ್**

೬೨೭. ಜ್ಞಾನಪೀಠವನ್ನು ಕನ್ನಡಕ್ಕೆ ಮತ್ತೊಮ್ಮೆ ತಂದುಕೊಟ್ಟ ಇವರೊಬ್ಬ ಸವ್ಯಸಾಚಿ – **ಚಂದ್ರಶೇಖರ ಕಂಬಾರ**

೬೨೮. ಕನ್ನಡದ ಕಾದಂಬರಿ ಸಾಮ್ರಾಟರೆಂದು ಖ್ಯಾತರಾದವರು – **ಅ.ನ.ಕೃಷ್ಣರಾಯರು**

೬೨೯. ಹಳ್ಳಿಯ ಚಿತ್ರಗಳಿಗೆ ಇವರು ಹೆಸರುವಾಸಿ – **ಗೊರೂರು ರಾಮಸ್ವಾಮಿ ಅಯ್ಯಂಗಾರ್**

೬೩೦. ಮೇಲ್ಕೋಟೆಯಷ್ಟೇ ಸುಂದರ ಇವರ ಕವಿತೆಗಳು – **ಪು.ತಿ. ನರಸಿಂಹಾಚಾರ್**

೬೩೧. ಮೈಸೂರು ಮಲ್ಲಿಗೆಯಿಂದ ಕನ್ನಡಕ್ಕೆ ಪ್ರೇಮಸಿಂಚನ ಹರಡಿದವರು – **ಕೆ.ಎಸ್. ನರಸಿಂಹಸ್ವಾಮಿ**

೬೩೨. ಪ್ರಾಧ್ಯಾಪಕರು ಹೌದು, ಕನ್ನಡದ ಶಕ್ತಿಕೇಂದ್ರವೂ ಹೌದು – **ಎಂ. ಚಿದಾನಂದಮೂರ್ತಿ**

೬೩೩. ಅಪ್ರಿಯವಾದ ಸಂಶೋಧನೆಯನ್ನು ಮಾಡುತ್ತಾ ಸತ್ಯಾನ್ವೇಷಣೆಗೆ ಹೊರಟ ಇವರು ಪ್ರೌಢದೇವರಾಯನ ಬೆಂಬಲಿಗರು – **ಎಂ.ಎಂ. ಕಲಬುರ್ಗಿ**

೬೩೪. ಇವರ ಕಾದಂಬರಿ ಎಂದರೆ ಓದುಗರಿಗೆಲ್ಲಾ ಅತ್ಯಂತ ಪ್ರಿಯ – **ಎಸ್.ಎಲ್. ಭೈರಪ್ಪ**

೬೩೫. ನವ್ಯದ ಹರಿಕಾರರು – **ಎಂ. ಗೋಪಾಲಕೃಷ್ಣ ಅಡಿಗ**

೬೩೬. ಕಾವ್ಯನಾಮ ಹೆಣ್ಣಾದರೂ ಸದಾ ಚಾಟಿ ಬೀಸುವ ಈ ಗಂಡು ಕಸಾಪ ಮಾಜಿ ಅಧ್ಯಕ್ಷರೂ ಹೌದು – **ಚಂಪಾ**

೬೩೭. ಕನ್ನಡ ಕಾದಂಬರಿಗಳನ್ನು ಚಲನಚಿತ್ರಗೊಳಿಸಿ ಮನಸೂರೆಗೊಂಡ ನಿರ್ದೇಶಕ – **ಪುಟ್ಟಣ್ಣ ಕಣಗಾಲ್**

೬೩೮. ಚಲನಚಿತ್ರಗಳ ನಾಯಕನಟರಾದರೂ ಕನ್ನಡದ ನಾಯಕರಾಗಿ ಕಂಗೊಳಿಸಿದವರು – **ಡಾ. ರಾಜ್‌ಕುಮಾರ್**

೬೩೯. ಕನ್ನಡ ಚಲನಚಿತ್ರಗಳ ದುರಂತ ನಾಯಕಿ ಈ ಮಿನುಗುತಾರೆ – **ಕಲ್ಪನ**

೬೪೦. ಶಿಕ್ಷಣತಜ್ಞರೂ ಆದ ಜಾನಪದ ಗಾಯಕರು – **ಅಪ್ಪಗೆರೆ ತಿಮ್ಮರಾಜು**

## ೧೦. ಕನ್ನಡ ನಾಡಿನ ಇತಿಹಾಸ

೬೪೧. ಕಂಚಿಯಲ್ಲಿ ಪಲ್ಲವರ ಅಟ್ಟಹಾಸವನ್ನು ಅಡಗಿಸಿದ ವೀರ ಕನ್ನಡಿಗ – **ಮಯೂರವರ್ಮ**

೬೪೨. ಉತ್ತರಾಪಥೇಶ್ವರನ ಸೊಕ್ಕು ಮುರಿದ ಧೀರ ಕನ್ನಡಿಗ – **ಇಮ್ಮಡಿ ಪುಲಿಕೇಶಿ**

೬೪೩. ನೃಪತುಂಗನೆಂದೇ ಖ್ಯಾತನಾದ ದೊರೆ – **ಅಮೋಘವರ್ಷ**

೬೪೪. ಇವನು ಬಾಹುಬಲಿಯನ್ನು ಕನ್ನಡಕ್ಕೆ ಕರೆತಂದ ದಂಡನಾಯಕ – **ಚಾವುಂಡರಾಯ**

೬೪೫. ಬಿಟ್ಟಿಗನ ಮಡದಿ ಸಕಲಕಲಾನೈಪುಣ್ಯತೆಯ ರಾಣಿ – **ಶಾಂತಲಾದೇವಿ**

೬೪೬. ಹುಚ್ಚುದೊರೆ ತೊಗಲಕನಿಗೆ ನೀರಿಳಿಸಿದ ಕನ್ನಡ ಕುವರ – **ಕುಮಾರರಾಮ**

೬೪೭. ಆನೆಗೊಂದಿಯನ್ನು ವಿಜಯನಗರವನ್ನಾಗಿ ಮಾರ್ಪಡಿಸಿದ ಕನ್ನಡಕುವರರು – **ಹಕ್ಕಬುಕ್ಕರು**

೬೪೮. ಕೆಳದಿಯ ರಾಣಿ ಮರಾಠರಿಗೆ ಜೀವವಿತ್ತಳು – **ಕೆಳದಿ ಚೆನ್ನಮ್ಮ**

೬೪೯. ರಣಧೀರ ಕಂಠೀರವ ಈ ವಂಶಕ್ಕೆ ಸೇರಿದವನು – **ಮೈಸೂರು ಒಡೆಯರು**

೬೫೦. ಥ್ಯಾಕರೆಯನ್ನು ಯಮಪುರಿಗಟ್ಟಿದ ರಾಣಿ ಮತ್ತು ಆತ್ಮಾರ್ಪಣೆಗೊಂಡ ಅವಳ ನೆಚ್ಚಿನ ಭಂಟ – **ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ**